ಸ್ಥಾಪನೆ - 2023

# ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ.)

ನಂ. 16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು 560009

# ಶ್ರೀ ವಾಸವಿ ಎಜುಕೇಷನ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ (ರಿ)




# ತೃತೀಯ ಸರ್ವಸದಸ್ಯರ ಸಭೆ

## ಆಡಳಿತ ಮಂಡಳಿ ವರದಿ

**ದಿನಾಂಕ: 14–9–2025**

www.kavms.com   9663900439 / 080-22206151/52   kavms@gmail.com



# ಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು

# ಶ್ರೀ ವಾಸವೀ ಪೀಠಂ

ನಂ 57, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560003

# ಶ್ರೀ ವಾಸವಿ ಎಜುಕೇಷನ್ ಕೋ-ಆಪರೇಟಿವ್ ಸೋಸೈಟಿ ನಿಯಮಿತ (ರಿ)

ನಂ. 16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು-09 ದೂರವಾಣಿ: 080-22206151/52,
ನೋಂದಣಿ ಸಂಖ್ಯೆ: ಕ್ರಮಾಂಕ: ಓ ಟಿ ಎಸ್ -1/250/ಹೆಚ್ ಒ ಟಿ/53761/2022-23
E-MAIL: kavmss@gmail.com

## 3ನೇ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿನಾಂಕ: 14-09-2025
ಸಮಯ: ಮಧ್ಯಾಹ್ನ 3.00 ಘಂಟೆಗೆ

ಸ್ಥಳ: ವಾಸವಿ ಮಹಲ್
ಈಸ್ಟ್ ಪಾರ್ಕ ರಸ್ತೆ, 8ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-03

ಆತ್ಮೀಯ ಸದಸ್ಯರೇ,

ನಮ್ಮ ಸಂಸ್ಥೆಯ 3ನೇ ಸರ್ವಸದಸ್ಯರ ಸಭೆಯನ್ನು ದಿನಾಂಕ: 14-09-2025ರ ಭಾನುವಾರ ಮದ್ಯಾಹ್ನ 3.00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ರಾ ಪ ರವಿಶಂಕರ್‌ರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಲು ಕರೆಯಲಾಗಿದೆ. ಸಂಘದ ಸದಸ್ಯರಾದ ತಾವು ಸಭೆಗೆ ತಪ್ಪದೇ ಭಾಗವಹಿಸಬೇಕಾಗಿ ಪ್ರಾರ್ಥನೆ.

### ವಿಷಯ ಸೂಚಿ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. 3ನೇ ವಾರ್ಷಿಕ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
4. ಹಿಂದಿನ ಸರ್ವಸದಸ್ಯರ ಸಭೆಯ ನಡವಳಿಕೆಗಳ ಮಂಡನೆ ಹಾಗೂ ಅಂಗೀಕಾರ.
5. 2024-2025ನೇ ಸಾಲಿನ ಆಡಳಿತ ವರದಿ ಮಂಡನೆ ಹಾಗೂ ಅಂಗೀಕಾರ.
6. 2024-2025ನೇ ಸಾಲಿನ ಲೆಕ್ಕಪತ್ರಗಳ ಹಾಗೂ ಲೆಕ್ಕಪರಿಶೋಧಕರ ವರದಿ ಮಂಡನೆ ಹಾಗೂ ಅಂಗೀಕಾರ.
7. 2025-2026ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ.
8. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು.
9. ವಂದನಾರ್ಪಣೆ.

ಆಡಳಿತ ಮಂಡಳಿಯ ಪರವಾಗಿ

Shubha

( ಶುಭಶ್ರೀ ಎ )
ಮುಖ್ಯ ಕಾರ್ಯನಿರ್ವಾಹಕರು

ದಿನಾಂಕ: 30/08/2025
ಸ್ಥಳ: ಬೆಂಗಳೂರು

# ವಿಶೇಷ ಸೂಚನೆ

- ಸಭೆಯನ್ನು ಮಧ್ಯಾಹ್ನ 3.00 ಘಂಟೆಗೆ ಸರಿಯಾಗಿ ಪ್ರಾರಂಭಿಸಲಾಗುತ್ತದೆ. ಸಭೆಗೆ 10 ನಿಮಿಷ ಮುಂಚಿತವಾಗಿ ಸದಸ್ಯರು ಆಗಮಿಸಿ ಸಮಯ ಪಾಲನೆಗೆ ಸಹಕರಿಸಬೇಕಾಗಿ ಕೋರಿದೆ.
- ಸಭೆಯಲ್ಲಿ ಚರ್ಚಿಸತಕ್ಕ ಯಾವುದೇ ಪ್ರಮುಖ ವಿಷಯಗಳು ಇದ್ದಲ್ಲಿ ಲಿಖಿತ ಮೂಲಕ ಕಛೇರಿಗೆ ಕನಿಷ್ಠ 5 ದಿನಗಳ ಮೊದಲು ತಲುಪಿಸಿದಲ್ಲಿ ಅಂತಹ ವಿಷಯಗಳನ್ನು ಆದ್ಯತೆ ಮೇರೆಗೆ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ.
- ಸದಸ್ಯರಿಗೆ ಮಾತ್ರ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ.
- ಸಭಾ ಸೂಚನಾ ಪತ್ರದೊಂದಿಗೆ ಸಭೆಗೆ ಆಗಮಿಸಲು ಕೋರಿದೆ.
- ಇದುವರೆವಿಗೂ ಯಾವುದೇ ಸದಸ್ಯರು ಷೇರು ಸರ್ಟಿಫಿಕೇಟ್ ಪಡೆದುಕೊಳ್ಳದಿದ್ದಲ್ಲಿ ದಯಾಮಾಡಿ ಕೂಡಲೇ ಪಡೆದುಕೊಳ್ಳಲು ಕೋರಿದೆ.
- ದಿನಾಂಕ: 10–9–2025ರ ನಂತರ ಈ ಕೆಳಕಂಡ ವೆಬ್‌ಸೈಟ್ **www. kavms.com** ನಲ್ಲಿ ತಾವು ಸರ್ವಸದಸ್ಯರ ಸಭೆಗೆ ಸಂಬಂಧಿಸಿದ ಎಲ್ಲಾ ಕಾಗದಪತ್ರ ಪಡೆದುಕೊಳ್ಳಲು ಅವಕಾಶವಿದೆ.
- ಮಧ್ಯಾಹ್ನ 2.00 ಘಂಟೆಯಿಂದ ಸದಸ್ಯರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ, ದಯವಿಟ್ಟು ಸಮಯಕ್ಕೆ ಆಗಮಿಸಿ ಸಹಕರಿಸಿ.

# ಶ್ರೀ ವಾಸವಿ ಎಜುಕೇಷನ್‌ಕೋ–ಆಪರೇಟಿವ್ ಸೊಸೈಟಿ ನಿಯಮಿತ

## ಪ್ರಥಮ ಸರ್ವಸದಸ್ಯರ ಸಭೆಯ ನಡವಳಿಕೆಗಳು

ದಿನಾಂಕ 15–9–2024ರ ಗುರುವಾರ ಮಧ್ಯಾಹ್ನ 3.00 ಘಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ನಗರದ ಮಲ್ಲೇಶ್ವರಂ ಬಡಾವಣೆಯಲ್ಲಿರುವ ವಾಸವಿ ಮಹಲ್‌ನಲಿ ನಡೆದ 2ನೇ ಸರ್ವಸದಸ್ಯರ ಸಭೆಯ ನಡವಳಿಕೆಗಳು,

**ಒಟ್ಟು ಹಾಜರಾತಿ 215**

### 1. ಪ್ರಾರ್ಥನೆ:

ಶ್ರೀ ಕೆ ಆರ್ ನಾಗರಾಜರವರ ಪ್ರಾರ್ಥನೆಯೊಂದಿಗೆ ಸಭೆಯ ಕಾರ್ಯಕಲಾಪಗಳು ಆರಂಭವಾಯಿತು.

### 2. ಸ್ವಾಗತ ಭಾಷಣ:

ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಸಭೆಯಲ್ಲಿ ಹಾಜರಿದ್ದ ಪದಾಧಿಕಾರಿಗಳಿಗೆ, ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರಿಗು ಮತ್ತು ಸಭೆಯಲ್ಲಿ ಹಾಜರಿದ್ದ ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭೆಯ ನೂತನ ಅಧ್ಯಕ್ಷೆಯಾಗಿ ಆಯ್ಕೆಯಾದ ಶ್ರೀಮತಿ ಉಮಾಸಾಯಿರಾಂರವರಿಗೂ ಹಾಗೂ ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಆತ್ಮೀಯವಾಗಿ ಸ್ವಾಗತವನ್ನು ಕೋರಿದರು. ನಂತರಪದಾಧಿಕಾರಿಗಳ ಕಿರುಪರಿಚಯವನ್ನು ಸಭೆಗೆ ಮಾಡಿಕೊಟ್ಟರು.

### 3. ದ್ವಿತೀಯ ವಾರ್ಷಿಕ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು:

ಶ್ರೀ ವಾಸವಿ ಎಜುಕೇಷನ್‌ಕೋ–ಆಪರೇಟಿವ್ ಸೊಸೈಟಿ ನಿಯಮಿತದ ನಿರ್ದೇಶಕರಾದ ಶ್ರೀ ಕೆ ಆರ್ ನಾಗರಾಜ್‌ರವರು 2ನೇ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ಸಭೆಯಲ್ಲಿ ಮಂಡಿಸಿ, ಈ ಬಗ್ಗೆ ಸದಸ್ಯರಿಗೆಏನಾದರೂ ಮಾಹಿತಿ ಬೇಕಾಗಿದ್ದಲ್ಲಿ ನೀಡುತ್ತೇವೆಂದು ತಿಳಿಸಿದರು ಈ ಸಂದರ್ಭದಲ್ಲಿ ಮಾತನಾಡಿದ ಸದಸ್ಯರಾದ ಶ್ರೀ ಬಿ ವಿ ಲವಕುಮಾರ್ ಸೂಚನಾಪತ್ರ ನಮಗೆಲ್ಲರಿಗೂ ಪೋಸ್ಟ್ ಮೂಲಕ ಸೇರಿದೆ ಹಾಗೂ ವಿಷಯ ಸ್ಪಷ್ಟವಾಗಿದೆ. 2ನೇ ಸರ್ವಸದಸ್ಯರ ಸಭೆಯ ಸೂಚನಾಪತ್ರ ಅಂಗೀಕರಿಸಬಹುದೆಂದು ಕೋರಿದ ಹಿನ್ನೆಲೆಯಲ್ಲಿ ಸಭೆಯು ಸರ್ವಾನುಮತದಿಂದ ಸೂಚನಾಪತ್ರವನ್ನು ಅಂಗೀಕರಿಸಿತು.

### 4. ಹಿಂದಿನ ಸರ್ವಸದಸ್ಯರ ಸಭೆಯ ನಡವಳಿಕೆಗಳ ಮಂಡನೆ ಹಾಗೂ ಅಂಗೀಕಾರ:

ಶ್ರೀ ವಾಸವಿ ಎಜುಕೇಷನ್‌ಕೋ–ಆಪರೇಟಿವ್ ಸೊಸೈಟಿ ನಿಯಮಿತದನಿರ್ದೇಶಕರಾದ ಶ್ರೀ ಮಂಜುನಾಥ್–ಎಸ್‌ರವರು ಹಿಂದಿನ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಮಂಡಿಸಿದರು ಈ ಸಂದರ್ಭದಲ್ಲಿ ಮಾತನಾಡಿದಶ್ರೀ ವೆಂಕಟೇಶ್ ಹಾಗೂ ಶ್ರೀ ಅಮರ್‌ನಾಥ್ ಸುಂಕು ಹಿಂದಿನ ಸರ್ವಸದಸ್ಯರ ಸಭೆಯ ನಡವಳಿಕೆಗಳ ಮಂಡನೆ ಸ್ಪಷ್ಟವಾಗಿ ದಾಖಲು ಮಾಡಲಾಗಿದೆ ಹಿಂದಿನ ಸರ್ವಸದಸ್ಯರ ಸಭೆಯ ನಡುವಳಿಕೆಗಳನ್ನು ಅಂಗೀಕರಿಸಬಹುದೆಂದು ಮಾಡಿದ ಮನವಿಯನ್ನು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

### 5. 2023–2024ನೇ ಸಾಲಿನ ಆಡಳಿತ ಮಂಡಳಿ ವರದಿ ಮಂಡನೆ ಹಾಗೂ ಅಂಗೀಕಾರ:

ಶ್ರೀ ವಾಸವಿ ಎಜುಕೇಷನ್‌ಕೋ–ಆಪರೇಟಿವ್ ಸೊಸೈಟಿ ನಿಯಮಿತದನಿರ್ದೇಶಕರಾದಶ್ರೀ ಟಿ ಟಿ ಸತ್ಯನಾರಾಯಣರವರು 2023–2024ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಓದಿ ಸಭೆಯಲ್ಲಿ ಮಂಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ರವಿ ಕುಮಾರ್ ಆಡಳಿತ ಮಂಡಳಿ ವರದಿಯು

ವರ್ಷದ ಪ್ರತಿಯೊಂದು ಮಾಹಿತಿ ಒಳಗೊಂಡಿದ್ದು, ಸರಳ ಕನ್ನಡ ಭಾಷೆಯಲ್ಲಿದ್ದು ಉತ್ತಮವಾಗಿ ಮೂಡಿಬಂದಿದೆ, ಈ ಅಂದರೆ 2023–24ರ ಆಡಳಿತ ಮಂಡಳಿ ವರದಿಯನ್ನು ನಾನು ಅನುಮೋದಿಸುತ್ತೇನೆ ಎಂದು ಶ್ರೀ ಹರಿಪ್ರಸಾದ್‌ರವರು ತಿಳಿಸಿದ ನಂತರ 2023–2024ರಆಡಳಿತ ಮಂಡಳಿ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

### 6. 2023–2024ನೇ ಸಾಲಿನ ಲೆಕ್ಕಪತ್ರಗಳ ಹಾಗೂ ಲೆಕ್ಕಪರಿಶೋಧಕರ ವರದಿ ಮಂಡನೆ ಹಾಗೂ ಅಂಗೀಕಾರ:

ಶ್ರೀವಾಸವಿ ಎಜುಕೇಷನ್‌ಕೋ–ಆಪರೇಟಿವ್ ಸೊಸೈಟಿಯ ಹಿರಿಯ ನಿರ್ದೇಶಕರಾದ ಶ್ರಿ ವೆಂಕಟೇಶಯ್ಯ ಎ ರವರು 2023–2024ನೇ ಸಾಲಿನ ಲೆಕ್ಕ ಪರಿಶೋಧಕರಿಂದ ಸಿದ್ದಪಡಿಸಿರುವ ಲೆಕ್ಕಪತ್ರಗಳನ್ನು ಸಭೆಯಲ್ಲಿ ಮಂಡಿಸಿದರು. ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಜಯಣ್ಣರವರು ಮಾತನಾಡಿ ಶ್ರೀವಾಸವಿ ಎಜುಕೇಷನ್‌ಕೋ–ಆಪರೇಟಿವ್ ಸಂಸ್ಥೆಯ ಲೆಕ್ಕಪತ್ರಗಳು ಪಾರದರ್ಶಕವಾಗಿ ಮೂಡಿಬಂದಿದೆ ಆದ್ದರಿಂದ ಆಡಳಿತ ಮಂಡಳಿಗೆ ಧನ್ಯವಾದಗಳೊಂದಿಗೆ ಅಭಿಪ್ರಾಯ ವ್ಯಕ್ತಪಡಿಸಿದರು.
ಬೀರೂರಿನ ಶ್ರೀ ಮಂಜುನಾಥ್‌ರವರು 2023–2024ರ ಲೆಕ್ಕಪತ್ರವನ್ನು ಅಂಗೀಕರಿಸಬಹುದೆಂದು ತಿಳಿಸಿದ ನಂತರ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

### 7. ನಿವ್ವಳ ಲಾಭ:

ಶ್ರೀ ಎ ವೆಂಕಟೇಶಯ್ಯರವರು ಮುಂದುವರೆದು ಮಾತನಾಡುತ್ತಾ ಶ್ರೀವಾಸವಿ ಎಜುಕೇಷನ್‌ಕೋ–ಆಪರೇಟಿವ್ ಸೊಸೈಟಿ ನಿಯಮಿತದ ಎಲ್ಲಾ ರೀತಿಯ ಖರ್ಚು–ವೆಚ್ಚಗಳ ನಂತರ ಸಂಸ್ಥೆಯು 37,08,918.00/–ರೂಗಳ ನಿವ್ವಳ ಲಾಭವನ್ನು ಗಳಿಸಿದೆ ಎಂದು ಸಭೆಗೆ ಮನವರಿಕೆ ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಮಾತನಾಡಿದ ಸದಸ್ಯರಾದ ಶ್ರೀ ನರಸಿಂಹಮೂರ್ತಿ, ಶ್ರೀ ಬಾಲಕೃಷ್ಣಮೂರ್ತಿ ಮಂಡ್ಯ ಹಾಗೂ ಇತರರು ಮಾತನಾಡಿ ಸಂಘದ ಕಾರ್ಯಚಟುವಟಿಕೆಗಳು ಇನ್ನೂ ಪ್ರಾರಂಭವಾಗಿಲ್ಲ ಮುಂದೆ ದೊಡ್ಡದೊಡ್ಡ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಈಗ ಬಂದಿರುವ ಲಾಭಾಂಶವನ್ನು ಸದಸ್ಯರಿಗೆ ಹಂಚಿದರೆ ಅತ್ಯಂತ ಚಿಕ್ಕ ಮೌಲ್ಯದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ 5ವರ್ಷಗಳ ಕಾಲ ಸಂಘಕ್ಕೆ ಬರುವ ನಿವ್ವಳ ಲಾಭದಿಂದ ಸದಸ್ಯರಿಗೆ ಲಾಭಾಂಶ ನೀಡುವ ಬದಲಿಗೆ ಅದನ್ನು ಸಂಘದ ಅಭಿವೃದ್ಧಿಗಾಗಿ ಮೀಸಲಿಟ್ಟು ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಬಳಸಿಕೊಳ್ಳಿ ಎಂದು ಸಭೆಗೆ ತಿಳಿಸಿದರು.ಇವರ ಮಾತುಗಳಿಗೆ ಪ್ರತಿಕ್ರಿಯಿಸಿದ ನಿರ್ದೇಶಕ ಶ್ರೀ ವೆಂಕಟೇಶ್ ವಿ ರವರು ಮುಂದಿನ 5ವರ್ಷಗಳ ತೀರ್ಮಾನವನ್ನು ಈಗಲೇ ತೆಗೆದುಕೊಳ್ಳಲಾಗುವುದಿಲ್ಲ ಸಭೆಯು ಒಪ್ಪಿಗೆ ನೀಡಿದರೆ ಈ ವರ್ಷ ಸದಸ್ಯರಿಗೆ ಲಾಭಾಂಶ ನೀಡಲು ಉಳಿಕೆಯಾಗುವ ಮೊತ್ತ 23,14,838/–ರೂಗಳು ಕಟ್ಟಡ ಅಭಿವೃದ್ಧಿಗೆ ವರ್ಗಾಯಿಸಿಕೊಳ್ಳುತ್ತೇವೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಭೆಯು ಸರ್ವಾನುಮತದಿಂದ 2023–2024ನೇ ಸಾಲಿಗೆ ಸದಸ್ಯರಿಗೆ ನೀಡಬೇಕಾಗಿದ್ದ ಲಾಭಾಂಶವನ್ನು ಕಟ್ಟಡಅಭಿವೃದ್ಧಿಗೆ ವರ್ಗಾಯಿಸಲು ತೀರ್ಮಾನಿಸಲಾಯಿತು. ನಂತರ ಸಭೆಯು ಸರ್ವಾನುಮತದಿಂದಅಂಗೀಕಾರ ನೀಡಿತು.

### 8. 2024–25ನೇ ಸಾಲಿನ ಮಂಡನೆ ಮತ್ತು ಅನುಮೋದನೆ:

ನಿರ್ದೇಶಕರಾದ ಶ್ರೀ.ವೆಂಕಟೇಶಯ್ಯ ಎರವರು 2024–25ನೇ ಸಾಲಿನ ಅಂದಾಜುಪತ್ರ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಿದರು. ಶ್ರೀ ಅನಿಲ್ ಕುಮಾರ್ ಮತ್ತು ಶ್ರೀ ನಾಗರಾಜ್‌ಗುಪ್ತಾರವರು ಅಂದಾಜುಪತ್ರ ಸಮಂಜಸವಾಗಿ ಮೂಡಿ ಬಂದಿದೆ ಎಂದು ಹೇಳಿದ ನಂತರ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**9. ನೆಲಮಂಗಲ ತಾಲ್ಲೂಕಿನ ದಾಬಸ್‌ಪೇಟೆಯಲ್ಲಿ ವಸತಿಶಾಲೆ ನಿರ್ಮಾಣ ಮಾಡುವ ಬಗ್ಗೆ.**

ಸಂಘದ ಉದ್ದೇಶದಲ್ಲಿ ಉಲ್ಲೇಖವಾಗಿರುವಂತೆ, ನಾವು ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಕಾರ್ಯನಿರ್ವಹಿಸಬೇಕಿರುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ದಾಬಸ್‌ಪೇಟೆಯಲ್ಲಿ 1960ರಿಂದ ಕಾರ್ಯನಿರ್ವಹಿಸುತ್ತಿರುವ ಸೋಂಪುರ ರೂರಲ್ ಎಜುಕೇಷನ್ ಸೊಸೈಟಿ ಇದರ ಆಶ್ರಯದಲ್ಲಿ ನಡೆಯುತ್ತಿರುವ ಸಿ ವಿ ಜಿ ಪ್ರೌಢಶಾಲೆ ಹಾಗೂ ಪದವಿ ಪೂರ್ವಕಾಲೇಜು ನಮ್ಮ ಮಾತೃ ಸಂಸ್ಥೆಯಾದ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆ ಸಂಸ್ಥೆಯೊಂದಿಗೆ ನಾವು ಜೊತೆಗೂಡಿ ಅಲ್ಲಿರುವ ಸಂಸ್ಥೆಯ ಜಾಗವನ್ನು ಸದುಪಯೋಗ ಪಡಿಸಿಕೊಂಡು ಸರಿ ಸುಮಾರ 8 ಎಕರೆ ಜಾಗದಲ್ಲಿ ಆಧುನಿಕ ಶಿಕ್ಷಣ ಸಂಸ್ಥೆಯನ್ನು(ವಸತಿ ಮತ್ತು ಸಾಮಾನ್ಯ ಶಾಲೆ) ನಿರ್ಮಾಣ ಮಾಡುವ ಮೂಲಕ ನಮ್ಮ ಸಂಘದ ಉದ್ದೇಶಗಳನ್ನು ಪೂರೈಸಿದಂತಾಗುತ್ತದೆ ಮತ್ತು ಈ ತಾಲ್ಲೂಕಿಗೆ ಅತ್ಯುತ್ತಮ ಶಿಕ್ಷಣ ಸಂಸ್ಥೆ ನೀಡುವ ಮೂಲಕ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಉತ್ತಮವಾದ, ಉನ್ನತವಾದಹಾಗೂ ನೈತಿಕ ಶಿಕ್ಷಣ ನೀಡಲು ಸಹಕಾ–ರಿಯಾಗುತ್ತದೆಂದು ಸಭೆಗೆ ತಿಳಿಸಿ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸೂಕ್ತ ಸಮಾಧಾನ ನೀಡಿ ನಂತರದಲ್ಲಿ ಕಾನೂನು ತಜ್ಞರ ಅಭಿಪ್ರಾಯಗಳನ್ನು ಪಡೆದುಕೊಂಡು ನಂತರ ಆದಷ್ಟುಜಾಗ್ರತೆಯಾಗಿ ಶಿಕ್ಷಣ ಸಂಸ್ಥೆಯ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಬೇಕೆಂದು ಸದಸ್ಯರು ಮಾಡಿದ ಮನವಿಗೆ ಆಡಳಿತ ಮಂಡಳಿಯವರು ಈ ಸಭೆಯಒಪ್ಪಿಗೆ ನಂತರ ನಾವೂ ಸಹ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು, ಸಭೆಯು ತಿಳಿಸಿದ ಪ್ರತಿಯೊಂದು ವಿಚಾರವನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುತ್ತೇವೆಂದು ತಿಳಿಸಿದ ನಂತರ ಸಭೆಯು ಸರ್ವಾನುಮತದಿಂದ ದಾಬಸ್‌ಪೇಟೆಯಲ್ಲಿ ವಸತಿ ಶಾಲೆ ನಿರ್ಮಾಣ ಮಾಡಲು ಅಂಗೀಕಾರನೀಡಿತು.

**10. ಭವಿಷ್ಯದ ಯೋಜನೆಗಳ ಬಗ್ಗೆ:**

1. ನಮ್ಮ ಸಂಘದ ಮಾತೃ ಸಂಸ್ಥೆಯಾದ ಕರ್ನಾಟಕಆರ್ಯವೈಶ್ಯ ಮಹಾಸಭೆಯ ಸಹಕಾರದಿಂದ ಕಾರ್ಯನಿರ್ವಹಿಸುತ್ತಿರುವ ಹಾಗೂ 62 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಸೋಂಪುರ ರೂರಲ್ ಎಜುಕೇಷನ್ ಸೊಸೈಟಿ ಇವರ ಆಶ್ರಯದಲ್ಲಿರುವ ಸಿ ವಿ ಜಿ ಪ್ರೌಢಶಾಲೆ ಹಾಗೂ ಪದವಿ ಪೂರ್ವಕಾಲೇಜು ಬೆಂಗಳೂರು ಗ್ರಾಮಾಂತರ ನೆಲಮಂಗಲ ತಾಲ್ಲೂಕಿನ ದಾಬಸ್‌ಪೇಟೆಯಲ್ಲಿ ಸಾಮಾನ್ಯ ಕಾರ್ಯನಿರ್ವಹಿಸುತ್ತಿದೆ. ಸದರಿ ಸಂಸ್ಥೆಗೆ ಸುಮಾರು 7.5 ಎಕರೆಯಷ್ಟು ವಿಶಾಲವಾದಜಾಗವಿದೆ. ನಮ್ಮ ಸಂಸ್ಥೆಯು ಅದರೊಂದಿಗೆ ಜೊತೆಗೂಡಿ ಉತ್ತಮವಾದ, ವಿಶಾಲವಾದ ಶಿಕ್ಷಣ ಸಂಸ್ಥೆಯನ್ನು ನಿರ್ಮಾಣ ಮಾಡಲು ಸಾಧ್ಯವಿದೆ. ಇದರಿಂದಾಗಿ ನಾವು ಖರೀದಿಸಲು ಹಣ ವಿನಿಯೋಗಿಸುವ ಅವಶ್ಯಕತೆ ಇರುವುದಿಲ್ಲ ಹಾಗೂ ಈ ಸಭೆ ಒಪ್ಪಿಗೆ ನೀಡಿದಲ್ಲಿ ಆದಷ್ಟು ಜಾಗ್ರತೆಯಾಗಿ ಸಿ ವಿ ಜಿ ಪ್ರೌಢಶಾಲೆ ಹಾಗೂ ಪದವಿ ಪೂರ್ವಕಾಲೇಜಿನ ಆಡಳಿತ ಮಂಡಳಿಯೊಂದಿಗೆ ಮಾತನಾಡಿಒಪ್ಪಂದ ಮಾಡಿಕೊಂಡು ನಿರ್ಮಾಣಕ್ಕೆ ಮುಂದಾಗಬಹುದೆಂದು ನೀಡಿದ ಸಲಹೆಯನ್ನು ಸಭೆಯು ಸಂತೋಷದಿಂದ ಸ್ವಾಗತಿಸಿ ಈ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು, ಒಪ್ಪಂದ ಮಾಡಿಕೊಳ್ಳಲು, ಅನುಷ್ಠಾನಗೊಳಿಸಲು ಆಡಳಿತಮಂಡಳಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿತು.

2. ಮುಂದುವರೆದಂತೆ ಮಾತನಾಡಿದ ಅಧ್ಯಕ್ಷರು ದೇಶದ ಅಭಿವೃದ್ಧಿಗೆ ಸ್ವಾಭಿಮಾನಿ ಯುವ ಪೀಳಿಗೆಯನ್ನು ನೀಡುವ ಶಾಲೆಯ ನಿರ್ಮಾಣ ಅಂತೆಯೇ ರಾಜ್ಯದ ಉದ್ದಗಲಕ್ಕೂ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಯಾವುದಾದರೂ ಶಾಲೆಗಳು ಅಪೇಕ್ಷೆ ಪಟ್ಟಲ್ಲಿ ಅಂತಹ ಶಾಲೆಗಳ ಬಗ್ಗೆ ಸೂಕ್ತವಾದ ತೀರ್ಮಾನವನ್ನು

ತೆಗೆದುಕೊಂಡು ಜಂಟಿಯಾಗಿ ಅಭಿವೃದ್ಧಿಪಡಿಸುವ ಬಗ್ಗೆ ಕಾಲಕಾಲಕ್ಕೆ ತಕ್ಕಂತೆತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ನೀಡಿದ ಸಲಹೆಯನ್ನು ಸಭೆಯು ಸರ್ವಾನು ಮತದಿಂದ ಅಂಗೀಕರಿಸಲಾಯಿತು.

**11. 2024–2025ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ:**

ಅಧ್ಯಕ್ಷರು ಮುಂದಿನ 2023–2024ನೇ ಸಾಲಿನ ಲೆಕ್ಕಪರಿಶೋಧನೆ ಮಾಡಿರುವ ಲೆಕ್ಕ ಪರಿಶೋಧಕರಾದ ಶ್ರೀ ಮಲ್ಲಪ್ಪ ಅವರನ್ನು 2024–2025ನೇ ಸಾಲಿಗು ನೇಮಕ ಮಾಡಿಕೊಳ್ಳುಲು ಸಭೆಯು ಸರ್ವಾನುಮತದಿಂದ ಅಂಗೀಕರಿಸಲಾಯಿತು.

**12. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು:**

1. ಮಹಾಸಭೆಯ ಆಶ್ರಯದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸುವ ಶಾಲಾ ಕಟ್ಟಡದ ವಿನ್ಯಾಸವನ್ನು ಹೊಂದಿರುವ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳ ಮೂಲಕ ಜನತೆಗೆ ತಲುಪಿಸಬೇಕೆಂಬ ಬೆಂಗಳೂರಿನ ಶ್ರೀ ವೆಂಕಟೇಶ್ ವಿ. ರವರು ಮಾಡಿದ ಮನವಿಯನ್ನು ಆಲಿಸಿದ ಅಧ್ಯಕ್ಷರು ಸೂಕ್ತ ಸಮಯದಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದರು.

2. ತುಮಕೂರಿನ ಶ್ರೀ ಶಿವಕುಮಾರ್‌ರವರು ಮಾತನಾಡಿವಾಸವಿ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ ಆಲೋಚಿಸಬೇಕೆಂದು ನೀಡಿದಸಲಹೆಯನ್ನು ಸಭೆಯುಆಲಿಸಿತು

3. ಬೆಂಗಳೂರಿನ ಶ್ರೀ ನರಸಿಂಹ ಮೂರ್ತಿಯವರು ಸಂಘಕ್ಕೆ ಬಂದಿರುವ ನಿವ್ವಳ ಲಾಭದಲ್ಲಿ ಸದಸ್ಯರಿಗೆ ಲಾಭಾಂಶ ನೀಡದೇ ಸದರಿ ಮೊತ್ತವನ್ನು ಮುಂದಿನ 5 ವರ್ಷಗಳ ಕಾಲ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬೇಕೆಂದು ನೀಡಿದ ಸಲಹೆಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**13. ವಂದನಾರ್ಪಣೆ:**

ನಿರ್ದೇಶಕರಾದ ಶ್ರೀ ನಾಗೇಶ್ ಬಾಬುರವರ ವಂದನಾರ್ಪಣೆಯೊಂದಿಗೆ ಸಭೆಯ ಕಾರ್ಯಕಲಾಪಗಳು ಸಂಪನ್ನವಾಯಿತು.

ಸಹಿ/–

**(ಶುಭಶ್ರೀ)**

**ಮುಖ್ಯಕಾರ್ಯನಿರ್ವಾಹಕರು**

**ಕರ್ನಾಟಕ ಆರ್ಯವೈಶ್ಯ ಮಹಾಸಭೆ(ರಿ)**

## ಶ್ರೀ ವಾಸವಿ ಎಜುಕೇಷನ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ

**ನಂ.16, ಶೇಷಾದ್ರಿ ರಸ್ತೆ, ಗಾಂಧೀನಗರ, ಬೆಂಗಳೂರು–560009**

# ಆಡಳಿತ ಮಂಡಳಿ ವರದಿ

**ಆತ್ಮೀಯ ಸದಸ್ಯ ಬಂಧುಗಳೇ,**

ನೈತಿಕ ಮೌಲ್ಯಗಳನ್ನು, ಸಂಸ್ಕಾರಗಳನ್ನು ನಾಡಿನ ಸಂಸ್ಕೃತಿಯನ್ನು ತಿಳಿಸಿಕೊಟ್ಟು ಸಮರ್ಥವಾದ ಪೀಳಿಗೆಯನ್ನು ಸೃಷ್ಟಿ ಮಾಡುವ ಶಿಕ್ಷಣವೇ ಅರ್ಥಪೂರ್ಣವಾದದ್ದು, ದೇಶದ ಅಭಿವೃದ್ಧಿಗೆ ಅವಶ್ಯವಾದದ್ದು, ಅಂತಹ ಅಮೂಲ್ಯ ಶಿಕ್ಷಣ ಪದ್ಧತಿ ಇಂದಿನ ಮಕ್ಕಳಿಗೆ ಮರೀಚಿಕೆಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಕಳೆದುಹೋಗುತ್ತಿರುವ ಮೌಲ್ಯಗಳನ್ನು ಮರು ಸ್ಥಾಪಿಸಿ, ಗುಣಮಟ್ಟದ, ದೇಶ ಪ್ರೇಮದ ಶಿಕ್ಷಣವನ್ನು ನೀಡುವ ಒಂದು ಉತ್ತಮ ಶಿಕ್ಷಣ ಸಂಸ್ಥೆ ಬೇಕೆಂಬ ಸಾವಿರಾರು ಬಂಧುಗಳ ಹಲವಾರು ವರ್ಷಗಳ ಅಪೇಕ್ಷೆ, ನಿರೀಕ್ಷೆ, ಕನಸುಗಳನ್ನು ಸಾಕಾರಗೊಳಿಸುವ ಶ್ರೀ ವಾಸವಿ ಎಜುಕೇಷನ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಸಾಕಾರಕ್ಕೆ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಮುನ್ನುಡಿ ಬರೆಯಿತು.

ಸದೃಢ ರಾಷ್ಟ್ರ ನಿರ್ಮಾಣದ ಯುವಶಕ್ತಿಯನ್ನು ಬೆಳೆಸುವ ಸತ್ಸಂಕಲ್ಪದ ಶಿಕ್ಷಣ ಸಂಸ್ಥೆಯ ನಿರ್ಮಾಣ ಬೆಂಗಳೂರು ಗ್ರಾಮಾಂತರ ನೆಲಮಂಗಲ ತಾಲೂಕಿನ ದಾಬಸ್ಪೇಟೆಯಲ್ಲಿ ಆರಂಭವಾಗಬೇಕಿತ್ತು, ಆದರೆ ಕೆಲವು ಸಮಾಜಘಾತಕ ಶಕ್ತಿಗಳ ತೊಂದರೆಯಿಂದ ಶಿಕ್ಷಣ ಸಂಸ್ಥೆಯ ನಿರ್ಮಾಣ ವಿಳಂಬವಾಗುತ್ತಿದೆ. ಆದರೂ ನಮ್ಮ ಆಡಳಿತ ಮಂಡಳಿ ಧೃತಿಗೆಡದೆ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ ಕಾನೂನು ಹೋರಾಟವನ್ನು ಕೈಗೆತ್ತಿಕೊಂಡಿದೆ. ಆದಷ್ಟು ಶೀಘ್ರದಲ್ಲಿ ಕಾನೂನಾತ್ಮಕವಾಗಿ ನಮಗೆ ಅನುಕೂಲವಾಗುತ್ತದೆ ಎಂಬ ವಿಶ್ವಾಸವಿದೆ. ಹೊಸ ಶಿಕ್ಷಣ ಸಂಸ್ಥೆಗೆ ಆದಷ್ಟು ಜಾಗೃತೆಯಾಗಿ ಬುನಾದಿ ಹಾಕುತ್ತೇವೆ, ಸಹಕಾರವಿರಲಿ.

2023–24ರ ಆರ್ಥಿಕ ವರ್ಷದಲ್ಲಿ 2005 ಸದಸ್ಯರನ್ನು ಹೊಂದಿದ್ದ ನಮ್ಮ ಸಂಘವು 2024–25ರ ಸಾಲಿನಲ್ಲಿ ತನ್ನ ಸದಸ್ಯ ಬಲವನ್ನು ಹೆಚ್ಚಿಸಿಕೊಂಡು 31 ಮಾರ್ಚ್ 2025ಕ್ಕೆ ಸದಸ್ಯರ ಸಂಖ್ಯೆ 2415 ಆಗಿದೆ. ಮುಂದುವರೆದಂತೆ 30 ಆಗಸ್ಟ್ 2025ಕ್ಕೆ ಸದಸ್ಯ ಬಲ 2433 ಆಗಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

# ಸಂತಾಪ



ಶ್ರೀಮತಿ ಎನ್ ಪಾರ್ವತಿ

ಶ್ರೀ ವಾಸವಿ ಎಜುಕೇಷನ್ ಕೋ–ಆಪರೇಟಿವ್ ಸೊಸೈಟಿ ನಿಯಮಿತವನ್ನು ಆರಂಭಿಸಲು ಶ್ರಮದಾನ ಮಾಡಿ, ಸಂಘದ ಸ್ಥಾಪನೆಯಲ್ಲಿ ಪೂರ್ಣ ತೊಡಗಿಸಿಕೊಂಡಿದ್ದ ಹಾಗೂ ಪ್ರಸ್ತುತ ಆಡಳಿತ ಮಂಡಳಿಯ ನಿರ್ದೇಶಕರು ಆಗಿದ್ದ **ಶ್ರೀಮತಿ ಎನ್ ಪಾರ್ವತಿರವರು** ದಿನಾಂಕ 30–9–2024ರಂದು ಇಹಲೋಕ ಯಾತ್ರೆಯನ್ನು ಮುಗಿಸಿರುತ್ತಾರೆ. ಇವರು ನಮ್ಮ ಸಂಘಕ್ಕೆ ಮತ್ತು ಸಮಾಜಕ್ಕೆ ನೀಡರುವ ಸೇವೆಯನ್ನು ಸ್ಮರಿಸುತ್ತಾ ಇವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಮಾರ್ಗದರ್ಶದಲ್ಲಿ ಪ್ರಾರಂಭವಾದ ನಮ್ಮ ಸಹಕಾರಿ ಸಂಘಕ್ಕೆ **ಮಹಾಸಭೆಯು ಬೆನ್ನೆಲುಬಾಗಿ ನಿಂತು ಪ್ರತಿಯೊಂದು ಜಿಲ್ಲೆಯಲ್ಲಿಯೂ ಸಹಕಾರ ನೀಡುತ್ತಾ ಬಂದಿರುತ್ತದೆ.** ನಮ್ಮ ಸಂಘದ ಷೇರು ಸಂಗ್ರಹಣೆಯಲ್ಲಿ ಬಹುದೊಡ್ಡ ಪಾತ್ರವನ್ನು ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರು ನಿರ್ವಹಿಸಿದ್ದಾರೆ. ಎಂದು ತಿಳಿಸಲು ಸಂತೋಷವಾಗುತ್ತದೆ. ಒಂದು ಅರ್ಥದಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಹಾಗೂ ಶ್ರೀ ವಾಸವಿ ಎಜುಕೇಷನ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಒಂದೇ ಎಂಬ ಭಾವದಲ್ಲಿ ಅದರ ಅಭಿವೃದ್ಧಿಗಾಗಿ ಎರಡು ಸಂಸ್ಥೆಗಳ ಆತಳಿತ ಮಂಡಳಿಯವರು ಕಾರ್ಯನಿರ್ವಹಿಸುತ್ತಿರುವುದು ಅಭಿವೃದ್ಧಿಗೆ ಪೂರಕವಾಗಿದೆ. ಅಂತೆಯೇ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಪ್ರತಿಯೊಬ್ಬ ಸಿಬ್ಬಂದಿವರ್ಗದವರು ಸಹ ನಮ್ಮ ಸಂಘದ ಕೆಲಸಕಾರ್ಯಗಳನ್ನು ಯಾವ ಅಪೇಕ್ಷೆ ಇಲ್ಲದೆ ನಿಸ್ವಾರ್ಥದಿಂದ ನಡೆಸಿಕೊಡುತ್ತಾ ತಮ್ಮ ಅಳಿಲು ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಮಾನ್ಯ ಸದಸ್ಯರೇ, ಅಭಿವೃದ್ಧಿ ಕಾರ್ಯಗಳು ಒಂದು ವರ್ಷ ತಡವಾಗಿದೆ ಸರಿ, ಆದರೆ ಅಭಿವೃದ್ಧಿಯ ಆಲೋಚನೆದಿಂದ ನಾವು ದೂರ ಸರಿದಿಲ್ಲ, ಸರಿಯುವುದೂ ಇಲ್ಲ. ನಮ್ಮ ಸದಸ್ಯ ಬಾಂಧವರ ಇಚ್ಛೆಯಂತೆ ಅಂತರಾಷ್ಟೀಯ ಗುಣಮಟ್ಟದ ನೈತಿಕ ಮೌಲ್ಯಗಳನ್ನುಳ್ಳ, ಮಾನವೀಯ ಮೌಲ್ಯಗಳನ್ನು ಬಿತ್ತಿ ರಾಷ್ಟ ಶಕ್ತಿಯಾಗುವಂತಹ ಸದೃಢ ಯುವ ಪೀಳಿಗೆಯನ್ನು ದೇಶಕ್ಕೆ ಸಮರ್ಪಿಸುವ ಅತ್ಯುತ್ತಮ ಶಿಕ್ಷಣ ಸಂಸ್ಥೆಯನ್ನು ನಿರ್ಮಾಣ ಮಾಡುತ್ತೇವೆ. ಇದರಲ್ಲಿ ಯಾರಿಗೂ ಯಾವುದೇ ರೀತಿಯ ಅನುಮಾನಗಳು ಬೇಡ ತಮ್ಮಗಳೆಲ್ಲರ ಇಚ್ಛಾ ಶಕ್ತಿಯೇ ಸಂಘದ ಅಭಿವೃದ್ಧಿಗೆ ಆನೆ ಬಲವನ್ನು ತರುತ್ತದೆ ದಯಮಾಡಿ ಪ್ರತಿಯೊಬ್ಬ ಸದಸ್ಯರು ತಮ್ಮ ಕುಟುಂಬ ಸದಸ್ಯರನ್ನು/ಸ್ನೇಹಿತರನ್ನು ಸದಸ್ಯರನ್ನಾಗಿ ನೋಂದಾಯಿಸಿ ಸಂಘದ ಉದ್ದೇಶಗಳ ಅನುಷ್ಠಾನಕ್ಕೆ ಸಹಕರಿಸಿ ಎಂದು ಪ್ರಾರ್ಥಿಸುತ್ತಾ ನಮ್ಮ ಈ ಪುಟ್ಟ ವರದಿಯನ್ನು ತಮ್ಮ ಮಡಿಲಿಗೆ ಸಮರ್ಪಿಸುತ್ತಿದ್ದೇವೆ.

**ದಿನಾಂಕ 31–8–2025ಕ್ಕೆ ನಮ್ಮ**

**ಷೇರುದಾರರ ಸಂಖ್ಯೆ 2,433 ಷೇರುಮೊತ್ತ 3,23,22,000**

ಆಗಿರುತ್ತದೆ. ನಮ್ಮ ಗುರಿ 50 ಸಾವಿರ ಷೇರುದಾರರನ್ನು ಸಂಗ್ರಹಿಸುವುದು. ಗುರಿ ತಲುಪಲು ಪ್ರತಿಯೊಬ್ಬ ಸದಸ್ಯರು ಕಾರ್ಯ ವಾಚಾ ಮನಸಾ ಸಂಸ್ಥೆಯ ಜೊತೆ ಕೈಜೋಡಿಸಿ, ತಮಗೆ ತಿಳಿದಿರುವ ಬಂಧುಗಳನ್ನು ಷೇರುದಾರರನ್ನಾಗಿಸಿ ಸಂಸ್ಥೆಯ ಕ್ಷಿಪ್ರ ಬೆಳವಣಿಗೆಗೆ ಸಹಕರಿಸಲು ಆಡಳಿತ ಮಂಡಳಿ ವಿನಂತಿಸುತ್ತದೆ.

## ಹೂಡಿಕೆಗಳು

**ನಮ್ಮಲ್ಲಿ ಸಂಗ್ರಹವಾಗಿರುವ ಷೇರುಮೊತ್ತ ಹಾಗೂ ಇತರೇ ಶುಲ್ಕ ಒಟ್ಟು 3,57,97,500 ಆಗಿರುತ್ತದೆ. ಆ ಪೈಕಿ ರೂ 2,54,78,662 ಗಳನ್ನು ವಾಸವಿ ಎಂ ಎಸ್ ಸಿ ಎಂ ಕೋ ಆಪರೇಟಿವ್ ಬ್ಯಾಂಕ್ ನಿಯಮಿತದಲ್ಲಿ ನಿಶ್ಚಿತ ಠೇವಣಿಯಾಗಿ ಮತ್ತು 3,25,766 ಗಳನ್ನು ಉಳಿತಾಯ ಖಾತೆಯಲ್ಲಿ ತೊಡಗಿಸಿರುತ್ತೇವೆ.**

**ರೂ 1,13,00,000 ಗಳನ್ನು ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ ಇದರಲ್ಲಿ ನಿಶ್ಚಿತ ಠೇವಣಿಯಾಗಿ ತೊಡಗಿಸಲಾಗಿರುತ್ತದೆ.**

**ಒಟ್ಟಾರೆ ನಮ್ಮಲ್ಲಿರುವ ಮೊತ್ತ 3,71,04,428 ಆಗಿರುತ್ತದೆ.**



# ಶ್ರೀ ವಾಸವಿ ಎಜುಕೇಷನ್ ಸಹಕಾರ ಸಂಘ ನಿಯಮಿತ

## ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು

## ಇದರ 2024–25ರ ಸಾಲಿನ 01–04–2024 ರಿಂದ 31–03–2025 ರವರೆಗಿನ

## ಜಮಾ–ಖರ್ಚು ತಃಖ್ತೆ

| ಕ್ರ.ಸಂ. | ವಿವರ | ಜಮಾ | ಖರ್ಚು |
|---|---|---|---|
| 1 | ಸದಸ್ಯರ ಷೇರು ಬಂಡವಾಳ: | | |
| 1 | ಸಾಮಾನ್ಯ ಸದಸ್ಯರ ಷೇರು | 53,53,000.00 | 83,000.00 |
| | | | |
| 2 | ಬ್ಯಾಂಕ್ ಲೆಕ್ಕಗಳು: | | |
| 1 | ವಾಸವಿ ಎಂಎಸ್‌ಸಿಎಂ ಕೋ–ಆಪರೇಟಿವ್ ಬ್ಯಾಂಕ್ ಲಿ, | 3,67,40,979.00 | 3,61,67,792.00 |
| | | | |
| 3 | ಹೂಡಿಕೆಗಳು:– | | |
| 1 | ವಾಸವಿ ಎಂಎಸ್‌ಸಿಎಂ ಕೋ–ಆಪರೇಟಿವ್ ಬ್ಯಾಂಕ್ ಲಿ,– ನಿಶ್ಚಿತ ಠೇವಣಿ | – | 18,16,298.00 |
| 2 | ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿ – ನಿಶ್ಚಿತ ಠೇವಣಿ | 1,50,00,000.00 | 2,08,00,000.00 |
| | | | |
| 4 | ನಿಶ್ಚಿತ ಠೇವಣಿ ಹೂಡಿಕೆ ಸಾಲ | | |
| 1 | ವಾಸವಿ ಎಂ.ಎಸ್.ಸಿ.ಎಂ.ಸಿ ಬ್ಯಾಂಕ್ – ನಿಶ್ಚಿತ ಠೇವಣಿ ಸಾಲ | 1,50,00,000.00 | 1,50,00,000.00 |
| | | | |
| 5 | ಆದಾಯಗಳು: | | |
| 1 | ಷೇರು ಶುಲ್ಕ | 5,25,000.00 | – |
| 2 | ಪ್ರವೇಶ ಶುಲ್ಕ | 41,100.00 | – |
| 3 | ಇತರೆ ಆದಾಯ | 3,270.00 | – |
| 4 | ವಾಸವಿ ಎಂ.ಎಸ್.ಸಿ.ಎಂ ಕೋ–ಆಪರೇಟಿವ್ ಬ್ಯಾಂಕ್ – ನಿಶ್ಚಿತಠೇವಣಿ ಬಡ್ಡಿ | 20,41,924.00 | |
| 5 | ವಾಸವಿ ಎಂ.ಎಸ್.ಸಿ.ಎಂ ಕೋ–ಆಪರೇಟಿವ್ ಬ್ಯಾಂಕ್ – ಉ.ಖಾ ಬಡ್ಡಿ | 19,896.00 | – |
| 6 | ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಬಸವನಗುಡಿ ಶಾಖೆ– ನಿಶ್ಚಿತಠೇವಣಿ ಬಡ್ಡಿ | 1,25,000.00 | – |
| | | | |
| 6 | ಆಡಳಿತಾತ್ಮಕ ಖರ್ಚು: | | |
| 1 | ಲೇಖನ ಸಾಮಾಗ್ರಿ ವೆಚ್ಚ | – | 1,000.00 |
| 2 | ಬ್ಯಾಂಕ್ ಶುಲ್ಕ | – | 639.00 |
| 3 | ಸಿಬ್ಬಂದಿ ಸಂಬಳ | | 3,91,500.00 |
| 4 | ಅಂಚೆ ವೆಚ್ಚ | | 42,822.00 |
| 5 | ಆದಾಯ ತೆರಿಗೆ, ವೃತ್ತಿ ತೆರಿಗೆ, ಸಲಹಾ ಶುಲ್ಕ. | | 11,000.00 |
| 6 | ಇತರೆ ವೆಚ್ಚ | 28,931.00 | 40,000.00 |
| 7 | ಆಡಳಿತ ಮಂಡಳಿ ಸಭೆ ವೆಚ್ಚ | – | 8,805.00 |
| 8 | ಓಡಾಟ ವೆಚ್ಚ | | 510.00 |
| 9 | ಕಛೇರಿ ವೆಚ್ಚ | – | 6,410.00 |
| 10 | ನಿಶ್ಚಿತ ಠೇವಣಿ ಮೇಲಿನ ಸಾಲದ ಬಡ್ಡಿ – ವಿ.ಸಿ.ಸಿ.ಎಸ್ | | 3,66,184.00 |
| 11 | ವಾರ್ಷಿಕ ಮಹಾಸಭೆ ವೆಚ್ಚ | | 43,240.00 |

CA. MALLAPPA Chartered Accountant BANGALORE

| ಕ್ರ.ಸಂ. | ವಿವರ | ಜಮಾ | ಖರ್ಚು |
|---|---|---|---|
| | | | |
| 7 | <u>ಇತರೆ ಜಮಾ/ಪಾವತಿ:-</u> | | |
| 1 | ಟಿ.ಡಿ.ಎಸ್ ಎಂ.ಎಸ್.ಸಿ.ಎಂ.ಸಿ ಬ್ಯಾಂಕ್ ನಿ.ಠೇ ಬಡ್ಡಿ ವಸೂಲಾತಿಗಾಗಿ (24-25) ಬರಬೇಕಾದ್ದು | - | 5,000.00 |
| 2 | ಟಿ.ಡಿ.ಎಸ್ ಎಂ.ಎಸ್.ಸಿ.ಎಂ.ಸಿ ಬ್ಯಾಂಕ್ ನಿ.ಠೇ ಬಡ್ಡಿ ವಸೂಲಾತಿಗಾಗಿ (24-25) ಪಾವತಿಸಬೇಕಾದ್ದು | 5,000.00 | - |
| 3 | ಷೇರು ಅಮಾನತ್ತು ಖಾತೆ | - | 22,100.00 |
| 4 | ಟಿ.ಡಿ.ಎಸ್ ಪಾವತಿಸಬೇಕಾದ್ದು | 205.00 | 2,005.00 |
| 5 | ಕಂಪ್ಯೂಟರ್ ತಂತ್ರಾಂಶ ವೆಚ್ಚ ಪಾವತಿಸಬೇಕಾದ್ದು | - | 50,000.00 |
| 6 | ಲೆಕ್ಕಪರಿಶೋಧಕರ ಶುಲ್ಕ (2024-25) ಪಾವತಿಸಬೇಕಾದ್ದು | 35,000.00 | 27,000.00 |
| 7 | ಕಂಪ್ಯೂಟರ್ ತಂತ್ರಾಂಶ ಸವಕಳಿ ನಿಧಿ | 17,500.00 | - |
| | | | |
| 8 | <u>ನಿವ್ವಳ ಲಾಭ (2023-2024) ವಿಲೇವಾರಿ</u> | | 37,08,918.00 |
| 1 | ಆಪದ್ಧನ ನಿಧಿ | 9,30,000.00 | |
| 2 | ಕಟ್ಟಡ ನಿಧಿ | 27,23,338.00 | |
| 3 | ಸಹಕಾರ ಶಿಕ್ಷಣ ನಿಧಿ | 55,580.00 | |
| | | | |
| 9 | <u>ಕಾಯ್ದಿರಿಸಿದ್ದು :-</u> | | |
| 1 | ಕಂಪ್ಯೂಟರ್ ತಂತ್ರಾಂಶ ಸವಕಳಿ | - | 17,500.00 |
| 2 | ಲೆಕ್ಕಪರಿಶೋಧಕರ ಶುಲ್ಕ (2024-25) | - | 35,000.00 |
| | | | |
| 10 | ಪ್ರಾರಂಭ / ಅಂತಿಮ ನಗದು ಶಿಲ್ಕು | 26,650.00 | 25,650.00 |
| | ಒಟ್ಟು ಮೊತ್ತ | **7,86,72,373.00** | **7,86,72,373.00** |

ಅಧ್ಯಕ್ಷರು    ಉಪಾಧ್ಯಕ್ಷರು    ನಿರ್ದೇಶಕರು    ಮುಖ್ಯಕಾರ್ಯನಿರ್ವಹಣಾಧಿಕಾರಿ

'ಪರಿಶೀಲಿಸಿದೆ'

(ಕೆ.ಮಲ್ಲಪ್ಪ)

ಸನ್ನದು ಲೆಕ್ಕಪರಿಶೋಧಕರು

ಸ.ಸಂ : 203042

ನಂ.136/1, ತೆಂಗಿನ ಮರದರಸ್ತೆ, 8ನೇ ಅಡ್ಡರಸ್ತೆ,

ಮಲ್ಲೇಶ್ವರಂ, ಬೆಂಗಳೂರು-560003

UDIN: 25203042BMIWAG6191

CA. MALLAPPA K Chartered Accountant BANGALORE

# ಶ್ರೀ ವಾಸವಿ ಎಜುಕೇಷನ್ ಸಹಕಾರ ಸಂಘ ನಿಯಮಿತ

## ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು

## ಇದರ 2024–2025 ನೇ ಸಾಲಿನ ಲಾಭ–ನಷ್ಟ ತಃಖ್ತೆ

| ಕ್ರ.ಸಂ | ನಷ್ಟದ ವಿವರ | ಮೊಬಲಗು | ಮೊಬಲಗು | ಕ್ರ.ಸಂ | ಲಾಭದ ವಿವರ | ಮೊಬಲಗು | ಮೊಬಲಗು |
|---|---|---|---|---|---|---|---|
| 1 | ಆಡಳಿತಾತ್ಮಕ ಖರ್ಚು: | | 8,83,179.00 | 1 | ಆದಾಯಗಳು: | | 27,56,190.00 |
| 1 | ಲೇಖನ ಸಾಮಾಗ್ರಿ ವೆಚ್ಚ | 1,000.00 | | 1 | ಷೇರು ಶುಲ್ಕ | 5,25,000.00 | |
| 2 | ಬ್ಯಾಂಕ್ ಶುಲ್ಕ | 639.00 | | 2 | ಪ್ರವೇಶ ಶುಲ್ಕ | 41,100.00 | |
| 3 | ಸಿಬ್ಬಂದಿ ಸಂಬಳ | 3,91,500.00 | | 3 | ಇತರೆ ಆದಾಯ | 3,270.00 | |
| 4 | ಅಂಚೆ ವೆಚ್ಚ | 42,822.00 | | 4 | ವಾಸವಿ ಎಂ.ಎಸ್.ಸಿ.ಎಂ ಕೋ–ಆಪರೇಟಿವ್ ಬ್ಯಾಂಕ್ – ನಿಶ್ಚಿತಠೇವಣಿ ಬಡ್ಡಿ | 20,41,924.00 | |
| 5 | ಆದಾಯ ತೆರಿಗೆ, ವೃತ್ತಿ ತೆರಿಗೆ, ಸಲಹಾ ಶುಲ್ಕ. | 11,000.00 | | 5 | ವಾಸವಿ ಎಂ.ಎಸ್.ಸಿ.ಎಂ ಕೋ–ಆಪರೇಟಿವ್ ಬ್ಯಾಂಕ್ – ಉ.ಖಾ ಬಡ್ಡಿ | 19,896.00 | |
| 6 | ಇತರೆ ವೆಚ್ಚ | 11,069.00 | | 6 | ವಾಸವಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಬಸವನಗುಡಿ 'ಶಾಖೆ– ನಿಶ್ಚಿತಠೇವ | 1,25,000.00 | |
| 7 | ಆಡಳಿತ ಮಂಡಳಿ ಸಭೆ ವೆಚ್ಚ | 8,805.00 | | | | | |
| 8 | ಓಡಾಟ ವೆಚ್ಚ | 510.00 | | | | | |
| 9 | ಕಛೇರಿ ವೆಚ್ಚ | 6,410.00 | | | | | |
| 10 | ನಿಶ್ಚಿತ ಠೇವಣಿ ಮೇಲಿನ ಸಾಲದ ಬಡ್ಡಿ – ವಿ.ಸಿ.ಸಿ.ಎಸ್ | 3,66,184.00 | | | | | |
| 11 | ವಾರ್ಷಿಕ ಮಹಾಸಭೆ ವೆಚ್ಚ | 43,240.00 | | | | | |
| | | | | | | | |
| | | | | | | | |
| 2 | ಅವಕಾಶಗಳು | | 52,500.00 | | | | |
| 1 | ಲೆಕ್ಕಪರಿಶೋಧಕರ ಶುಲ್ಕ (2024–25) ಕಾಯ್ದಿರಿಸಿದ್ದು | 35,000.00 | | | | | |
| 2 | ಕಂಪ್ಯೂಟರ್ ತಂತ್ರಾಂಶ ಸವಕಳಿ ನಿಧಿ | 17,500.00 | | | | | |
| 4 | ನಿವ್ವಳ ಲಾಭ 2024–25ನೇ ಸಾಲಿಗೆ | | 18,20,511.00 | | | | |
| | ಒಟ್ಟು | | 27,56,190.00 | | ಒಟ್ಟು | | 27,56,190.00 |

ಅಧ್ಯಕ್ಷರು    ಉಪಾಧ್ಯಕ್ಷರು    ನಿರ್ದೇಶಕರು    ಮುಖ್ಯಕಾರ್ಯನಿರ್ವಹಣಾಧಿಕಾರಿ

'ಪರಿಶೀಲಿಸಿದೆ'

(ಕೆ.ಮಲ್ಲಪ್ಪ)
ಸನ್ನದು ಲೆಕ್ಕಪರಿಶೋಧಕರು
ಸ.ಸಂ : 203042
ನಂ.136/1, ತೆಂಗಿನ ಮರದರಸ್ತೆ, 8ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು–560003
UDIN:25203042BMIWAG6191

CA. MALLAPPA K Chartered Accountant BENGALORE

# ಶ್ರೀ ವಾಸವಿ ಎಜುಕೇಷನ್ ಸಹಕಾರ ಸಂಘ ನಿಯಮಿತ

## ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು

## ಇದರ ದಿನಾಂಕ 31-03-2025 ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

| 31-03-2024 | ಕ್ರಸಂ | ಜವಾಬ್ದಾರಿ ವಿವರಗಳು | ಮೊಬಲಗು | ಮೊಬಲಗು | 31-03-2024 | ಕ್ರಸಂ | ಆಸ್ತಿ ವಿವರಗಳು | ಮೊಬಲಗು | ಮೊಬಲಗು |
|---|---|---|---|---|---|---|---|---|---|
| | 1 | ಪಾವತಿಯಾದ ಷೇರು ಬಂಡವಾಳ : | | 3,20,61,000.00 | 26,650.00 | 1 | ನಗದು ಶಿಲ್ಕು : | | 25,650.00 |
| 2,67,91,000.00 | 1 | ಸಾಮಾನ್ಯ ಸದಸ್ಯರಿಂದ | 3,20,61,000.00 | | | | | | |
| | | | | | | 2 | ಬ್ಯಾಂಕುಗಳಲ್ಲಿ ಶಿಲ್ಕು : | | 7,88,718.00 |
| | 2 | ಆಪದ್ಧನ ನಿಧಿ | | 9,30,000.00 | 13,61,905.00 | 1 | ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್ ಲಿ. | 7,88,718.00 | |
| | | | | | | | | | |
| | 3 | ಇತರೆ ನಿಧಿಗಳು | | 27,40,838.00 | | | | | |
| – | 1 | ಕಟ್ಟಡ ನಿಧಿ | 27,23,338.00 | | | 3 | ಹೂಡಿಕೆಗಳು:– | | 3,67,78,662.00 |
| – | 2 | ತಂತ್ರಾಂಶ ಸವಕಳಿ ನಿಧಿ | 17,500.00 | | 2,36,62,364.00 | 1 | ವಾಸವಿ ಎಂ.ಎಸ್.ಸಿ.ಎಂ ಕೋ-ಆಪರೇಟಿವ್ ಬ್ಯಾಂಕ್ ಲಿ – ನಿಶ್ಚಿತ ಠೇವಣಿ | 2,54,78,662.00 | |
| | | | | | 55,00,000.00 | 2 | ವಾಸವಿ ಕ್ರೆಡಿಟ್ ಕೋ-ಆಪರೇಟಿವ್ ಸೋಸೈಟಿ ಲಿ ಮಲ್ಲೇಶ್ವರಂ- ನಿಶ್ಚಿತ ಠೇವಣಿ | 1,13,00,000.00 | |
| | 4 | ಇತರೆ ಜವಾಬ್ದಾರಿಗಳು : | | 1,32,041.00 | | | | | |
| 22,201.00 | 1 | ಷೇರು ಅಮಾನತ್ತು ಖಾತೆ | 101.00 | | | 4 | ಚರಾಸ್ತಿಗಳು :– | | 50,000.00 |
| 1,800.00 | 2 | ಟಿಡಿಎಸ್ ಪಾವತಿಸಬೇಕಾದ್ದು | – | | 50,000.00 | 1 | ಕಂಪ್ಯೂಟರ್ ತಂತ್ರಾಂಶ | 50,000.00 | |
| 36,360.00 | 3 | ಟಿಡಿಎಸ್ 2023-24 ವಸೂಲಾತಿಗಾಗಿ | 36,360.00 | | | | | | |
| – | | (ಎಂಎಸ್‌ಸಿಎಂಸಿ ನಿ.ಠೇ ಬಡ್ಡಿ) | | | | 5 | ಇತರೆ ಆಸ್ತಿಗಳು : | | 41,360.00 |
| – | 4 | ಟಿಡಿಎಸ್ 2024-25 ವಸೂಲಾತಿಗಾಗಿ | 5,000.00 | | | 1 | ಟಿಡಿಎಸ್ 2023-24 ವಸೂಲಾತಿಗಾಗಿ | 36,360.00 | |
| | | (ಎಂಎಸ್‌ಸಿಎಂಸಿ ನಿ.ಠೇ ಬಡ್ಡಿ) | | | | | (ಎಂಎಸ್‌ಸಿಎಂಸಿ ನಿ.ಠೇ ಬಡ್ಡಿ) | | |
| 27,000.00 | 5 | ಲೆಕ್ಕಪರಿಶೋಧನಾ ಶುಲ್ಕ (2024-25) | 35,000.00 | | 36,360.00 | 2 | ಟಿಡಿಎಸ್ 2024-25 ವಸೂಲಾತಿಗಾಗಿ | 5,000.00 | |
| 50,000.00 | 6 | ಕಂಪ್ಯೂಟರ್ ತಂತ್ರಾಂಶ ವೆಚ್ಚ ಪಾವತಿಸಬೇಕಾದ್ದು | | | | | (ಎಂಎಸ್‌ಸಿಎಂಸಿ ನಿ.ಠೇ ಬಡ್ಡಿ) | | |
| – | 7 | ಸಹಕಾರ ಶಿಕ್ಷಣ ನಿಧಿ | 55,580.00 | | | | | | |
| | 8 | ನಿವ್ವಳ ಲಾಭ: | | 18,20,511.00 | | | | | |
| 37,08,918.00 | | 2024-25ನೇ ಸಾಲಿನದ್ದು | 18,20,511.00 | | | | | | |
| 3,06,37,279.00 | | ಒಟ್ಟು | | 3,76,84,390.00 | 3,06,37,279.00 | | ಒಟ್ಟು | | 3,76,84,390.00 |

ಅಧ್ಯಕ್ಷರು — ಉಪಾಧ್ಯಕ್ಷರು — ನಿರ್ದೇಶಕರು — ಮುಖ್ಯಕಾರ್ಯನಿರ್ವಹಣಾಧಿಕಾರಿ

### "ಲೆಕ್ಕಪರಿಶೋಧಕರ ದೃಢೀಕರಣ ಪತ್ರ"

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(16) ರಂತೆ)

ನಾನು ಶ್ರೀ ಕೆ.ಮಲ್ಲಪ್ಪ, ಸನ್ನದು ಲೆಕ್ಕಪರಿಶೋಧಕರು ಈ ಮೂಲಕ ದೃಢೀಕರಿಸುವುದೇನೆಂದರೆ,

1 ನನ್ನ ತಿಳುವಳಿಕೆ, ಅಭಿಪ್ರಾಯ ಹಾಗೂ ಲೆಕ್ಕಪರಿಶೋಧನಾ ಕಾಲಕ್ಕೆ ನನಗೆ ನೀಡಿದ ವಿವರಣೆಗಳಂತೆ, ಸಂಘದ ಲೆಕ್ಕಪತ್ರಗಳು, ಆರ್ಥಿಕ ತಃಖ್ತೆಗಳು, ಅನುಸೂಚಿಗಳು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ಅಧಿನಿಯಮದಲ್ಲಿ ಅಗತ್ಯಪಡಿಸಿದ ರೀತಿಯಂತೆ ಮಾಹಿತಿ ನೀಡುತ್ತವೆ.

2 ದಿನಾಂಕ : 31-03-2025ರ ಅಂತ್ಯಕ್ಕೆ ಇದ್ದ ಆಡಾವೆ ಪತ್ರಿಕೆ ಹಾಗೂ ಸನ್ 2024-25ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಸಂಘದ ನಿಜವಾದ ಹಾಗೂ ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿ ಮತ್ತು ಲಾಭ ಹಾನಿಗಳನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯ ಪಡುತ್ತೇನೆ.

3 ನನ್ನ ಜ್ಞಾನ ಹಾಗೂ ನಂಬಿಕೆಯ ಪ್ರಕಾರ ಲೆಕ್ಕಪರಿಶೋಧನೆಗೆ ಅವಶ್ಯವಾದ ಮಾಹಿತಿ ಹಾಗೂ ವಿವರಣೆಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇನೆ

4 ಸಂಘದ ಲೆಕ್ಕಪರಿಶೋಧನಾ ಕಾಲಕ್ಕೆ ಕಂಡುಬಂದಂತೆ ಸಂಘದಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಇಡಲಾಗಿದೆ ಎಂದು ಅಭಿಪ್ರಾಯ ಪಡುತ್ತೇನೆ.

5 ವರದಿಗೆ ಲಗತ್ತಿಸಿದ ಆಡಾವೆ ಪತ್ರಿಕೆ ಹಾಗೂ ಇತರೆ ಆರ್ಥಿಕ ತಃಖ್ತೆಗಳು ಸಂಘದಲ್ಲಿ ನಿರ್ವಹಿಸಿದ ಲೆಕ್ಕ ಪತ್ರ ಪುಸ್ತಕಗಳಿಗೆ ತಾಳೆ ಇರುತ್ತದೆ.

ಸ್ಥಳ : ಬೆಂಗಳೂರು

ದಿನಾಂಕ : 08-08-2025

(ಕೆ.ಮಲ್ಲಪ್ಪ)
ಸನ್ನದು ಲೆಕ್ಕಪರಿಶೋಧಕರು
ಸ.ಸಂ : 203042
ನಂ.136/1, ತೆಂಗಿನ ಮರದರಸ್ತೆ, 8ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560003
UDIN:25203042BMIWAG6191

CA. MALLAPPA K. Chartered Accountant BANGALORE

# ವಾಸವಿ ಎಜುಕೇಷನ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

ನಂ 16, ಶೇಷಾದ್ರಿ ರಸ್ತೆ ಗಾಂಧಿನಗರ, ಬೆಂಗಳೂರು-09, ಮೊಬೈಲ್ ಸಂಖ್ಯೆ 9663900439

## ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿ ಶಿಕ್ಷಣ ಸಂಸ್ಥೆ ನಿರ್ಮಾಣ ಮಾಡುವ ಬಗ್ಗೆ ನಮ್ಮ ಬಂಧುಗಳ ಹಲವಾರು ವರ್ಷಗಳ ಕನಸು ಈಗ ಶ್ರೀ ವಾಸವಿ ಎಜುಕೇಷನ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ ಸ್ಥಾಪಿನೆಯ ಮೂಲಕ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ. ಶಿಕ್ಷಣ ಸಹಕಾರ ಸಂಘಕ್ಕೆ ಸದಸ್ಯರಾಗಲು ಮುಕ್ತವಾದ ಅವಕಾಶ ನೀಡಲಾಗಿದೆ. ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರು ಅಥವಾ ಜಿಲ್ಲಾ ಸಮಿತಿ ಅಧ್ಯಕ್ಷರು/ಕಾರ್ಯದರ್ಶಿಗಳನ್ನು ಸಂಪರ್ಕಿಸಿ, ಅರ್ಜಿ ಪಡೆದುಕೊಂಡು ಸದಸ್ಯರಾಗಲು ಕೋರಿದೆ.

## ನೀವು ಏಕೆ ಸದಸ್ಯರಾಗ ಬೇಕು??

1. ವಿಶ್ವ ದರ್ಜೆಯ ಶಿಕ್ಷಣ ಸಂಸ್ಥೆಗಳ ನಿರ್ಮಾಣದಲ್ಲಿ ತಾವು ಷೇರುದಾರರಾಗಿ ಭಾಗವಹಿಸಲು ಅತ್ಯುತ್ತಮ ಅವಕಾಶ
2. ನಿಮ್ಮ ಮಕ್ಕಳು/ ಮೊಮ್ಮಕ್ಕಳಿಗೆ ರಿಯಾಯಿತಿ ದರದಲ್ಲಿ ಉತ್ತಮ ಶಿಕ್ಷಣ ಪಡೆಯಲು ಅವಕಾಶ.
3. ಸದಸ್ಯರ ಕುಟುಂಬದವರಿಗೆ ಕೆಲಸದಲ್ಲಿ ಆದ್ಯತೆ
4. ಸಂಘವು ಪ್ರಾರಂಭಿಸಿರುವ ಯಾವುದಾದರೂ ಒಂದು ಶೈಕ್ಷಣಿಕ ಕೋರ್ಸ್ ಗಳಿಗೆ ಶಿಫಾರಸು ಮಾಡುವ ಅವಕಾಶವಿರುತ್ತದೆ
5. ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣ ಸಂಸ್ಥೆಗಳ ನಿರ್ಮಾಣದ ಗುರಿ.
6. ಉತ್ತಮ ಗುಣಮಟ್ಟದ ವಸತಿ ಶಾಲೆ ಹಾಗೂ ಸಾಮಾನ್ಯ ಶಾಲೆ.
7. ಶಿಕ್ಷಣದ ಜೊತೆ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಕಲೆಗಳ ತರಬೇತಿ.
8. ಹಂತ ಹಂತದಲ್ಲಿ ರಾಜ್ಯಾದ್ಯಂತ ನಮ್ಮ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು.
9. ಸದಸ್ಯತ್ವ ಷೇರು ಮೊತ್ತ ಕನಿಷ್ಠ ಕೇವಲ ರೂ.11,100-00/-, ಹೆಚ್ಚುವರಿ ಶೇರುಗಳನ್ನು ಪಡೆದುಕೊಳ್ಳಲು ಅವಕಾಶವಿದೆ.
10. ಅಭಿವೃದ್ಧಿ ಹೊಂದಿದ ನಂತರ ಶಿಕ್ಷಣ ಸಂಸ್ಥೆಗಳಿಂದ ಬರುವ ಲಾಭದ ಮೊತ್ತವನ್ನು ಲಾಭಾಂಶ ರೂಪದಲ್ಲಿ ಶೇರುದಾರರಿಗೆ ಹಂಚಿಕೆ.

**ಷೇರಿನ ಮೊತ್ತವನ್ನು ಕಳುಹಿಸಿಕೊಡಲು ಈ ಕೆಳಗಿನ ಬ್ಯಾಂಕ್ ಖಾತೆಯನ್ನು ಉಪಯೋಗಿಸಿಕೊಳ್ಳಿ**

**ACCOUNT HOLDER NAME**
**SREE VASAVI EDUCATION CO OP SOCIETY LTD.,**
**ACCOUNT NUMBER - 1001005013163**
**IFSC CODE- KKBK0MSCMB1**
**BANK NAME**
**THE MYSORE SILK CLOTH MERCHANT CO-OPERATIVE BANK LTD.,**

**ಅಪ್ಲಿಕೇಶನ್‌ಗಾಗಿ QR ಕೋಡನ್ನು ಸ್ಕ್ಯಾನ್‌ಮಾಡಿ**




ಉದ್ದೇಶಿತ ಕಟ್ಟಡದ ವಿಹಂಗಮ ನೋಟ

**ನೀವು ಸದಸ್ಯರಾಗಿ ನಿಮ್ಮ ಸ್ನೇಹಿತರನ್ನು ಸದಸ್ಯರನ್ನಾಗಿಸಿ**

# ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ.)

# ಅಮರಜ್ಯೋತಿ ಯೋಜನೆ

## ಸದಸ್ಯತ್ವಕ್ಕೆ ಆಹ್ವಾನ

**2018 ರಿಂದ ಕಾರ್ಯನಿರ್ವಹಿಸುತ್ತಿರುವ ಮಹಾಸಭೆಯ ವೈಶಿಷ್ಟಪೂರ್ಣ ಯೋಜನೆ ಅಮರಜ್ಯೋತಿ. ಈ ಯೋಜನೆ ಸಾವಿರಾರು ಮನೆಗಳಲ್ಲಿ ಬೆಳಕು ನೀಡುವ ದೂರದೃಷ್ಟಿಯ ಹೃದಯಸ್ಪರ್ಶಿ ಯೋಜನೆ. ಈಗಾಗಲೇ ಸುಮಾರು 1.75 ಕೋಟಿ ರೂಪಾಯಿಗಳ ಪರಿಹಾರ ಧನವನ್ನು ವಿತರಿಸಲಾಗಿದೆ.**

## ಸದಸ್ಯರಿಂದ ಸದಸ್ಯರಿಗಾಗಿ

ಎಂಬ ಪರಿಕಲ್ಪನೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಈ ಯೋಜನೆಗೆ ಹೊಸದಾಗಿ ಸದಸ್ಯತ್ವ ನೀಡಲು ಮಹಾಸಭೆ ತೀರ್ಮಾನಿಸಿದೆ.

**>** ಅಮರಜ್ಯೋತಿ ಸದಸ್ಯರಾಗಲು ಕೇವಲ 3000 ರೂಪಾಯಿಗಳನ್ನು ವಿನಿಯೋಗಿಸಬೇಕು. **>** ರೂ. 3000 ಗಳಲ್ಲಿ ರೂ. 2500 ತಮ್ಮ ಖಾತೆಯಲ್ಲಿಯೇ ಠೇವಣಿ ಇರುತ್ತದೆ. **>** ರೂ. 500 ಆಡಳಿತಾತ್ಮಕ ವೆಚ್ಚಗಳಿಗಾಗಿ ತೆಗೆದುಕೊಳ್ಳಲಾಗುತ್ತದೆ. **>** ಯಾವುದೇ ಸದಸ್ಯರು ಮರಣ ಹೊಂದಿದರೆ ಕ್ರಿಯಾಶೀಲ ಸದಸ್ಯರ ಖಾತೆಯಿಂದ 100 ರೂಪಾಯಿಗಳನ್ನು ಕಡಿತಗೊಳಿಸಿ ಗರಿಷ್ಠ 5 ಲಕ್ಷ ರೂಪಾಯಿಗಳ ವರೆವಿಗೂ ಮೃತ ಸದಸ್ಯರ ನಾಮಿನಿಗೆ ಸಾಂತ್ವನ ರೂಪದ ಪರಿಹಾರವನ್ನು ನೀಡಲಾಗುತ್ತದೆ. **>** ಪ್ರತಿಯೊಂದು ಸಾವಿನ ಘಟನೆಗಳ ಬಗ್ಗೆ ಮತ್ತು ಸದಸ್ಯರ ಖಾತೆಗಳಿಂದ ಕಡಿತವಾಗಿರುವ ಮೊತ್ತದ ಬಗ್ಗೆ ಆಗಿಂದಾಗ್ಗೆ ಮಾಹಿತಿಗಳನ್ನು ತಾವು ನೋಂದಾಯಿಸಿರುವ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್ ಮೂಲಕ ನೀಡಲಾಗುತ್ತದೆ.

## ಸದಸ್ಯತ್ವಕ್ಕೆ ಅರ್ಹತೆ:

- ವಯೋಮಿತಿ 20 ರಿಂದ 60 ವರ್ಷದೊಳಗಿರಬೇಕು.
- ಮಹಾಸಭೆಯ ಸದಸ್ಯರಾಗಿರಬೇಕು, ಇಲ್ಲವೇ ಸದಸ್ಯತ್ವವನ್ನು ಪಡೆದುಕೊಂಡ ನಂತರ ಅಮರಜ್ಯೋತಿ ಯೋಜನೆಯ ಸದಸ್ಯರಾಗಬಹುದು.
- ಸದಸ್ಯತ್ವ ಪಡೆಯುವ 3 ವರ್ಷಕ್ಕೆ ಮೊದಲು ಯಾವುದೇ ಮಾರಣಾಂತಿಕ ಖಾಯಿಲೆಗಳಿಗೆ ಒಳಗಾಗಿರಬಾರದು.
- ತಮ್ಮ ಖಾತೆಯಿಂದ ಕಡಿತವಾದ ಮೊತ್ತವನ್ನು ಆಗಿಂದಾಗ್ಗೆ ತುಂಬಲು ಅಮರಜ್ಯೋತಿ **app** ಅಥವಾ ಅಮರಜ್ಯೋತಿ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲು ಅವಕಾಶವಿದೆ.
- ತಮ್ಮ ಖಾತೆಯ ಆಗ್ಗಿಂದಾಗಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಅಮರಜ್ಯೋತಿ **app** ಅನ್ನು ಬಳಸಿ.
- ಅಮರಜ್ಯೋತಿ ಸದಸ್ಯರಾಗಲು ಅರ್ಜಿಗಳನ್ನು ಮಹಾಸಭಾ ವೆಬ್‌ಸೈಟ್ **www.kavms.com** ಮೂಲಕ ಪಡೆದುಕೊಳ್ಳಲು ಅವಕಾಶವಿದೆ.
- ಹೆಚ್ಚಿನ ವಿವರಗಳಿಗಾಗಿ ನಿಮ್ಮ ಜಿಲ್ಲೆಯಲ್ಲಿರುವ ಮಹಾಸಭಾ ಕಾರ್ಯಕಾರಿ ಸಮಿತಿ/ಜಿಲ್ಲಾ ಸಮಿತಿ ಸದಸ್ಯರನ್ನು/ಮಹಾಸಭೆ ದೂರವಾಣಿ ಸಂಖ್ಯೆ: 9663900439 ನ್ನು ಸಂಪರ್ಕಿಸಲು ಕೋರಿದೆ.

ಅಮರಜ್ಯೋತಿ ಯೋಜನೆಯ ಬಗ್ಗೆ ತಿಳಿದುಕೊಳ್ಳಲು ಈ ಕೆಳಗಿನ **QR CODE** ಅನ್ನು ಸ್ಕ್ಯಾನ್ ಮಾಡಿ

**ನಮ್ಮ ನಂತರ ನಾವು ಇಚ್ಚಿಸಿದ ವ್ಯಕ್ತಿಗಳಿಗೆ ಆರ್ಥಿಕ ಶಕ್ತಿಗಳನ್ನು ತುಂಬುವ ಅತ್ಯುತ್ತಮ ಯೋಜನೆ**

**ಕೆಲವೇ ಕೆಲವು ಹೊಸ ನೋಂದಾವಣಿಗೆ ಅವಕಾಶವಿರುತ್ತದೆ**

# ಕರ್ನಾಟಕ ಆರ್ಯವೈಶ್ಯ ಮಹಾಸಭೆ ಚಾಲ್ತಿಯಲ್ಲಿರುವ

# ವೈಶಿಷ್ಟ್ಯ ಪೂರ್ಣ ಯೋಜನೆಗಳು

# ಸಮುದಾಯದ ಸೇವೆಯಲ್ಲಿ ಪ್ರಗತಿಯ ನಾಗಾಲೋಟ

# A BIRD'S EYE VIEW OF THE ACHIEVEMENTS

## OF THE KARNATAKA ARYAVYASYA MAHASABHA

### ವಾಸವಿ ಚೇತನ VASAVI CHETHANA

ಯಾವುದೇ ವ್ಯಕ್ತಿ ಹುಟ್ಟಿನಿಂದಲೇ ಶೇ.75ರಷ್ಟು ಅಂಗವೈಪಲ್ಯತೆ ಹೊಂದಿದ್ದರೆ ಮತ್ತು ಕೆಲಸ ಮಾಡಲು ಅಶಕ್ತರಾಗಿದ್ದಲ್ಲಿ ಅಂತಹ ವ್ಯಕ್ತಿಗಳ ನಿತ್ಯ ಜೀವನ ನಿರ್ವಹಣೆಗಾಗಿ ಆಜೀವ ಪರ್ಯಂತ ಮಾಸಿಕ ರೂ 1000 ಗಳ ಮಾಸಾಶನವನ್ನು ನೀಡುವಂತಹ ವಿಶೇಷ ಯೋಜನೆ –ವಾಸವಿ ಚೇತನ

Under VASAVI CHETHANA scheme, the Maha Sabha is providing financial help of Rs 1000 per month for the entire life to those who are physically-challenged by birth to the extent of 75 per cent and who are incapable to work.

### ವೈಶ್ಯ ಹಾಸ್ಟೆಲ್ VYSYA HOSTEL

ಉನ್ನತ ಶಿಕ್ಷಣದ ಕನಸನ್ನು ಹೊಂದಿ, ಬೆಂಗಳೂರು ನಗರಕ್ಕೆ ಆಗಮಿಸುವಂತಹ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟೋಪಚಾರ ಸೌಲಭ್ಯವನ್ನು ನೀಡುವ ಪರಂಪರೆಯನ್ನು ಹೊಂದಿರುವ ಯೋಜನೆ – ವೈಶ್ಯ ಹಾಸ್ಟೆಲ್

Under VYSYA HOSTEL scheme, we have provided accommodation with food to those youths who come to Bangalore in search of job and with an objective of higher studies.

### ಅತಿಥಿ ಗೃಹ GUEST HOUSE

ನಾನಾ ಕಾರ್ಯನಿಮಿತ್ತ ಬೆಂಗಳೂರು ನಗರಕ್ಕೆ ಆಗಮಿಸುವಂತಹ ನಮ್ಮ ಕುಲಭಾಂದವರಿಗೆ ಆತಿಥ್ಯ ನೀಡಲು ನಿರ್ಮಾಣವಾಗಿರುವ ಸುಸಜ್ಜಿತವಾದ, ಸುಂದರವಾದ ಆಶ್ರಯ ತಾಣ – ಅತಿಥಿ ಗೃಹ

ARYAVYSYA GUEST HOUSE has been established in order to provide accommodation to the members of our community who come to Bangalore on some work or the other.

### ಡಾರ್ಮೆಟರಿ ವಸತಿ DORMITORY

ಅತ್ಯಂತ ಕಡಿಮೆ ದರದಲ್ಲಿ ಖಾಸಗಿತನಕ್ಕೆ ಅಡ್ಡಿಯಾಗದ ಸಾಮೂಹಿಕ ವಸತಿ ಕುಲಭಾಂದವರಿಗೆ ಸೇವೆ ನೀಡುತ್ತಿದೆ.– ಡಾರ್ಮೆಟರಿ ವಸತಿ

The Maha Sabha has come up with DORMITORY where residential accommodation is provided at affordable cost without affecting their privacy.

### ವಿದ್ಯಾರ್ಥಿಮಿತ್ರ ಬಡ್ಡಿ ರಹಿತ ಸಾಲ ಯೋಜನೆ VIDYARTHIMITHRA INTEREST FREE, SECURITY FREE LOAN

ಇಂಜೀನಿಯರಿಂಗ್, ಮೆಡಿಕಲ್, ಎಂ ಬಿ ಎ, ಫಾರ್ಮಸಿ ಇತ್ಯಾದಿ ವೃತ್ತಿಪರ ಕೋರ್ಸುಗಳ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತೀ ವರ್ಷ ಗರಿಷ್ಠ ಒಂದು ಲಕ್ಷ ರೂಪಾಯಿಗಳವರೆವಿಗೂ ಆಧಾರ ರಹಿತ ಮತ್ತು ಬಡ್ಡಿ ರಹಿತ ಸಾಲ ಸೌಲಭ್ಯ ನೀಡುವ ವಿಶೇಷ ಯೋಜನೆ– ವಿದ್ಯಾರ್ಥಿಮಿತ್ರ

Under VIDYARTHI MITHRA scheme, an interest-free loan of Rs One lakh is being provided without any collateral security t o those students who are economically backward and who want pursue Engineering, Medical, CA, MBA and Pharmacy courses.

### ವಿದ್ಯಾರ್ಥಿಮಿತ್ರ ಲ್ಯಾಪ್‌ಟಾಪ್ ಯೋಜನೆ. VIDYARTHIMITHRA LAPTOP SCHEME

ಪ್ರತೀ ವರ್ಷವೂ ಸುಮಾರು 200 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರಾಸರಿ ರೂ. 1,20,00,000/– (ರೂಪಾಯಿ ಒಂದು ಕೋಟಿ ಇಪ್ಪತ್ತು ಲಕ್ಷ) ಮೌಲ್ಯದ ಲ್ಯಾಪ್‌ಟಾಪ್‌ಗಳನ್ನು ಕಳೆದ 3 ವರ್ಷಗಳಿಂದ, ಮಹಾಸಭೆ ರೂಪಿಸಿರುವ ನಿಯಮಾನುಸಾರ ನೀಡಲಾಗುತ್ತಿದೆ.– ಲ್ಯಾಪ್‌ಟಾಪ್ ಯೋಜನೆ.

Under LAPTOP scheme, the Maha Sabha has been distributing laptops for the three years worth Rs 1.20 crores to students at the rate of 200 students per year.

## ವಾಸವಿ ಅಕಾಡೆಮಿ VASAVI ACADEMY

ನಮ್ಮ ಸಮಾಜದ ಆಸಕ್ತ ವಿದ್ಯಾಮಾಣಿಕ್ಯಗಳನ್ನು ಗುರುತಿಸಿ ಅವರಿಗೆ ಕೇಂದ್ರ/ರಾಜ್ಯದ ಲೋಕ ಸೇವಾ ಆಯೋಗದ ಪರೀಕ್ಷೆಗಳನ್ನು ಎದುರಿಸುವ ಶೈಕ್ಷಣಿಕ ಸಾಮರ್ಥ್ಯವನ್ನು ತುಂಬಿ ಮುಂದಿನ ದಿನಗಳಲ್ಲಿ ನಮ್ಮ ಸಮಾಜದ ಐ.ಎ.ಎಸ್, ಐ.ಪಿ.ಎಸ್, ಐ.ಆರ್.ಎಸ್, ಕೆ.ಎ.ಎಸ್, ಇತ್ಯಾದಿ ಆಡಳಿತಾತ್ಮಕ ಅಧಿಕಾರಿಗಳನ್ನು ದೇಶ ಸೇವೆಗಾಗಿ ನೀಡುವಂತಹ ಸವಾಲಿನ ಕಾರ್ಯವನ್ನು ಕೈಗೆತ್ತಿಕೊಂಡ ಜನತೆಯ ವಿಶ್ವಾಸರ್ಹತೆಯ ಯೋಜನೆ – ವಾಸವಿ ಅಕಾಡೆಮಿ.

VASAVI ACADEMY has been doing a signal service by offering coaching and training to the students in order to prepare them for UPSC, IAS, IPS, KAS, IRS courses. This activity has been acclaimed by one and all. Rs 1.20 crores to students at the rate of 200 students per year.

## ಪ್ರತಿಭೋತ್ಸವ PRATHIBHOTHSAVA

ಎಸ್.ಎಸ್.ಎಲ್.ಸಿ. ನಂತರದ ಅಂತಿಮ ಪರೀಕ್ಷೆಗಳಲ್ಲಿ ಶೇ 90 ಕ್ಕಿಂತಲೂ ಹೆಚ್ಚು ಅಂಕ ಪಡೆದ ಅಥವಾ ಡಿಸ್ಟಿಂಕ್ಷನ್ ನಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ಸಾವಿರಾರು ಜನಗಳ ಸಮ್ಮುಖದಲ್ಲಿ ಪ್ರತಿಭಾಶೋಭಾಯಾತ್ರೆ, ಪದಕ ವಿತರಣೆ, ಪ್ರಶಸ್ತಿ ಪತ್ರ ಹಾಗೂ ನಗದು ಪುರಸ್ಕಾರವನ್ನು ನೀಡುವ ಅತ್ಯಂತ ಅಭೂತಪೂರ್ವವಾದ ಕಾರ್ಯಕ್ರಮ– ಪ್ರತಿಭೋತ್ಸವ

Under PRATHIBHOTHSAVA scheme, those students who score more than 90 per cent marks in the post-SSLC courses or pass in distinction are gathered at one place and felicitated by giving them certificates, citations and cash award. This gesture has enhanced their confidence as well as inspired the other students.

## ಅಮರಜ್ಯೋತಿ AMARAJYOTHI

ದು:ಖ ತುಂಬಿದ ಸಾವಿನ ಮನೆ, ಆರ್ಥಿಕ ಸಂಕಷ್ಟದಲ್ಲಿರುವ ಸಾವಿನ ಮನೆಯ ಆರ್ಥಿಕ ಸಹಕಾರಕ್ಕಾಗಿ ಮೂಡಿಬಂದ ವಿಶೇಷ ಯೋಜನೆ – ಅಮರಜ್ಯೋತಿ.

Under AMARA JYOTHI scheme, the Maha Sabha has been providing financial assistance to the families where death has occurred.

## ವೈಶ್ಯಾಂತರಂಗ VYSYANTHARANGA

ಆರ್ಯವೈಶ್ಯ ಸಮಾಜದ ಕಾರ್ಯಕ್ರಮಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಮನೆ ಮನೆಗೂ ತಲುಪಿಸುವ ಸಂಪರ್ಕವಾಹಿನಿ – ವೈಶ್ಯಾಂತರಂಗ.

The VYSYANTHARANGA is a social network site through which the activities of the Maha Sabha are being disseminated to the members effectively in a time-bound manner.

## ಆರೋಗ್ಯ ಭಾಗ್ಯ AROGYA BHAGYA

ಕೆಲವೊಂದು ಸಾಂಕ್ರಾಮಿಕ ಮಾರಣಾಂತಿಕ ಕಾಯಿಲೆಗಳು ಬಂದಾಗ ಇಂದಿನ ಆರೋಗ್ಯ ಕ್ಷೇತ್ರದಲ್ಲಿ ಮಧ್ಯಮ ಹಾಗೂ ಕೆಳವರ್ಗದ ನಾಗರೀಕರಿಗೆ ಆರೋಗ್ಯ ಸೇವೆಗೆ ಸಹಕಾರ – ಆರೋಗ್ಯ ಭಾಗ್ಯ

Under AROGYA BHAGYA scheme, the Maha Sabha has provided medical relief and assistance to those who have contracted diseases due to pandemic.

## ವಾಸವಿ ವಾನಪ್ರಸ್ಥಾಶ್ರಮ ಮತ್ತು ವಾಸವಿ ಕರುಣಾಶ್ರಯ VASAVI VANAPRASTHASHRAMA & VASAVI KARUNASHRAYA

ಪ್ರಶಾಂತವಾದ ಹಸಿರಿನ ವನಸಿರಿಯಿಂದ ಶೋಭಿತವಾಗಿರುವ ಸ್ಥಳದಲ್ಲಿ ಆಧುನಿಕ ಸೌಲಭ್ಯಗಳನ್ನುಳ್ಳ ಜೀವಕ್ಕೆ ನೆಮ್ಮದಿ ನೀಡುವಂತಹ ಸಂಧ್ಯಾಕಾಲದ ನಾಗರೀಕರಿಗೆ ಹಾಗೂ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ಉತ್ತಮ ಆರೋಗ್ಯ ಭಾಗ್ಯ, ಶಿಕ್ಷಣ ನೀಡುವ ಸುಸಜ್ಜಿತವಾದ ಕಟ್ಟಡ – ವಾಸವಿ ವಾನಪ್ರಸ್ಥಾಶ್ರಮ ಮತ್ತು ವಾಸವಿ ಕರುಣಾಶ್ರಯ

The two most noble and heart-warming projects taken up by the Maha Sabha are VASAVI VANAPRASTHASHRAMA & VASAVI KARUNASHRAYA In the first venture, we are taking care of the senior citizens in the evening of their life. In the second venture, we have opened up an establishment to take care of the unfortunate children who have lost their parents. This blend of the old and the young have proved to be the much-needed tonic in the form of love, affection and care for both old and young.

## ವಾಸವಿ ಎಕ್ಸ್‌ಲೆನ್ಸ್ VASAVI EXCELLENCE,

ದೇಶದ ಪ್ರತಿಷ್ಠಿತ ವಿದ್ಯುನ್ಮಾನ ವಾಹಿನಿ ಏಷ್ಯಾ ನೆಟ್‌ವರ್ಕ್ ಸುವರ್ಣಾ ನ್ಯೂಸ್ ಹಾಗೂ ರಾಜ್ಯದ ಅಚ್ಚು ಮೆಚ್ಚಿನ ದಿನಪತ್ರಿಕೆ ಕನ್ನಡಪ್ರಭ ಸಹಯೋಗದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ನಮ್ಮ ಸಮಾಜದ ಸಾಧಕರನ್ನು ಗುರುತಿಸಿ ಅಭಿನಂದಿಸಿ ಪ್ರೋತ್ಸಾಹಿಸುವ ವಿಶೇಷ ಪ್ರಶಸ್ತಿ ಪ್ರಧಾನ ಸಮಾರಂಭ– ವಾಸವಿ ಎಕ್ಸ್‌ಲೆನ್ಸ್.

Under VASAVI EXCELLENCE, a unique programme is being organized to identify, recognize and highlight the talented and meritorious members who have excelled in different walks of life. This programme is being conducted with leading Kannada daily KANNADA PRABHA and famous TV channel ASIANET SUVARNA, as media partners.

## ಸಂಧ್ಯಾಶ್ರೀ SANDHYA SHREE,

5 ವರ್ಷ ಮೇಲ್ಪಟ್ಟ ಬಡ ವಿಧವಾ ಮಾತೆಯರ ಜೀವನ ನಿರ್ವಹಣೆಗಾಗಿ ಪ್ರತೀ ತಿಂಗಳು ರೂ. 1500/–ಗಳನ್ನು ಆಜೀವ ಪರ್ಯಂತ ನೀಡುವ ವೈಶಿಷ್ಟ್ಯ ಪೂರ್ಣ ಯೋಜನೆ – ಸಂಧ್ಯಾಶ್ರೀ



Under SANDHYA SHREE, another humanitarian gesture, a sum of Rs 1500 is being provided to widows above the age of 75 and who are unable to ekk out their living.

## ಶ್ರೀ ವಾಸವಿ ಪೀಠ VASAVI PEETHA




ಸಮಾಜದಲ್ಲಿ ನಿರಂತರ ಅಧ್ಯಾತ್ಮಿಕ ಜಾಗೃತಿ ಮೂಡಿಸುತ್ತಾ, ಭವಿಷ್ಯದ ಯುವಜನತೆಯಲ್ಲಿ ಅಧ್ಯಾತ್ಮಿಕತೆಯ ಸಂಸ್ಕಾರ ಮೂಡಿಸಲು ಶ್ರೀ ವಾಸವಿ ಪೀಠದ ಮರು ಸ್ಥಾಪನೆ. ಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸ್ವಾಮಿಗಳಿಂದ ಪೀಠಾರೋಹಣ.

VASAVA PEETHA is the dream-come-true of our members. We have nursed a dream to have our own Guru Peetha which came true and became a reality with Sri Sri Sri Sachidananda Saraswathi ascending the Guru Peetha. He has been the leading and guiding the Arya Vysya Samaj with great devotion, diligence and is contributing in his own way to strengthen the noble mindset of the society members.

## ಶ್ರೀ ವಾಸವಿ ಗೋಶಾಲೆ – VASAVI GOSHALA

ಗೋವುಗಳ ಲಾಲನೆ–ಪೋಷಣೆ–ಸಂರಕ್ಷಣೆಯಂತಹ ಸಂಸ್ಕಾರಯುತ ಪವಿತ್ರ ಸೇವೆ–ಹುಣಸೂರು, ಮೈಸೂರು ಜಿಲ್ಲೆ



"Gao Vishwasya Matharaha" – the cow is the mother of the Universe. With this motto, the Mahasabha has undertaken this sacred service of cultivating, nursing and protecting cows at Hunsur in Mysore district.

## ವಾಸವಿ ಪೋರ್ಟಲ್ – VASAVI PORTAL



ಕರ್ನಾಟಕ ರಾಜ್ಯದಲ್ಲಿರುವ ಸರಿ ಸುಮಾರು 300ಕ್ಕೂ ಹೆಚ್ಚು ವಾಸವಿ ದೇವಾಲಯಗಳು ಹಾಗೂ ಪೆನಗೊಂಡೆಯ ವಾಸವಿ ಸುವರ್ಣ ಮಂದಿರಗಳನ್ನೆಲ್ಲಾ ವಿಶ್ವದ ಯಾವುದೇ ಭಾಗದಲ್ಲಿ ಕುಳಿತು ನೋಡಲು, ದೇವಾಲಯದ ಅರ್ಚಕರು/ಸಿಬ್ಬಂದಿ/ಆಡಳಿತ ಮಂಡಳಿಯವರೊಂದಿಗೆ ಮುಖಾಮುಖಿ ಮಾತನಾಡಿ ಸೇವೆ ಸಲ್ಲಿಸುವ ಅವಕಾಶವಿರುವ ವೈಶಿಷ್ಟ್ಯಪೂರ್ಣ ಯೋಜನೆ.

A unique project where you can sit and see more than 300 Vasavi temples in the state of Karnataka and Vasavi Suvarna Mandir in Penagonda anywhere in the world and also interact with the temple priests/ staff/ administrators face-to-face to do sevas.

## ಉದ್ಯೋಗಮಿತ್ರ. – UDYOGAMITRA

ನಾನಾ ಕಾರಣಗಳಿಂದ ಎಸ್ ಎಸ್ ಎಲ್ ಸಿ ನಂತರ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದೇ, ಅಥವಾ ಉನ್ನತ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ತಮ್ಮ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿರುವ ನಮ್ಮ ಯುವ ಜನತೆಗೆ ಆಧುನಿಕ ತಂತ್ರಜ್ಞಾನದ ವಿಷಯದ ಬಗ್ಗೆ 4 ತಿಂಗಳುಗಳ ಉಚಿತ ತರಬೇತಿ ನೀಡಿ ಉದ್ಯೋಗ ಕೊಡಿಸುವ ಮೂಲಕ ಚಿಂತೆಯ ಕತ್ತಲಿನಿಂದ ಭವಿಷ್ಯದ ಬೆಳಕಿನೆಡೆಗೆ ಕರೆತರುವ ಮಹತ್ವಪೂರ್ಣ ಯೋಜನೆ ಉದ್ಯೋಗಮಿತ್ರ.



UDYOGAMITRA is an important project to bring people in distress from the darkness of worry to the light of the future by providing 4 months free training on the subject of modern technology to our young people who are unable to continue their education after SSLC due to various reasons, or who have stopped their higher education halfway and are worried about their future

## ಶಿಕ್ಷಣ ಕ್ಷೇತ್ರ – EDUCATION SECTOR



ಸಿ.ವಿ.ಜಿ ಪ್ರೌಢ ಶಾಲೆ ಮತ್ತು ಪ್ರಥಮ ದರ್ಜೆ ಕಾಲೇಜು ಡಾಬಸ್ ಪೇಟೆಯ ನೆಲಮಂಗಲ ತಾಲ್ಲೂಕು ಇದರ ಅಭಿವೃದ್ಧಿಯ ಜವಾಬ್ದಾರಿ ಮತ್ತು ಉನ್ನತ ಶಿಕ್ಷಣದವರೆವಿಗೂ ವಿಸ್ತರಣೆಯ ಯೋಜನೆ.

CVG Primary School and First Grade College, Nelamangala Taluk of Dabuspete is responsible for the development and plans to extend to higher education

## ಮೈಸೂರು ಯೋಜನೆ – MYSORE PROJECT

ಮೈಸೂರು ನಗರದ ಹೃದಯ ಭಾಗದಲ್ಲಿ ನಿರ್ಮಾಣವಾಗಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹಾಸ್ಟೆಲ್, ವಾಸವಿ ಅಕಾಡೆಮಿ, 16 ಅಥಿತಿ ಗೃಹಗಳನ್ನುಳ್ಳ ವಾಸವಿ ಭವನ.



Vasavi Bhavan with a student hostel, Vasavi Academy and 16 guest rooms are built in the heart of Mysore city.




ವಿದ್ಯಾರ್ಥಿಮಿತ್ರ- ಲ್ಯಾಪ್‌ಟಾಪ್ ಪಡೆದ ವಿದ್ಯಾರ್ಥಿಗಳು




ಮುಖ್ಯ ಅತಿಥಿಗಳಿಂದ ಗೌರವ ಸ್ವೀಕರಿಸಿದ ವಿದ್ಯಾಮಾಣಿಕ್ಯಗಳು



ಸಂಧ್ಯಾಶ್ರೀ ಯೋಜನೆ ಫಲಾನುಭವಿಗಳು ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ

# MY NOTES

# ಸಿ ವಿ ಜಿ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರೌಢಶಾಲೆ

## ದಾಬಸ್ ಪೇಟೆ





# ಶ್ರೀ ವಾಸವಿ ಎಜುಕೇಷನ್‌ಕೋ-ಆಪರೇಟಿವ್ ಸೊಸೈಟಿ ನಿಯಮಿತ (ರಿ)



ಆರ್ ಪಿ ರವಿಶಂಕರ್
ಅಧ್ಯಕ್ಷರು



ಮನಂದಿ ಸುರೇಶ್
ಉಪಾಧ್ಯಕ್ಷರು



ಶುಭಶ್ರೀ
ಮುಖ್ಯ ಕಾರ್ಯನಿರ್ವಾಹಕರು

## ನಿರ್ದೇಶಕರು



ವಿ ವೆಂಕಟೇಶಯ್ಯ ಶೆಟ್ಟಿ



ನಾಗೇಶ್ ಬಾಬು ಪಿ



ಅಮರೇಶ್ ಕೆ ವಿ



ಎಂ ಎಲ್ ಉದಯ್‌ಕುಮಾರ್



ಕೊಸಗಿ ನಾಗರಾಜ್



ಟಿ ಟಿ ಸತ್ಯನಾರಾಯಣ



ಎಸ್ ಮಂಜುನಾಥ್



ಬಿ ಕೆ ಪ್ರಕಾಶ್



ನಾರಾಯಣ ಮೂರ್ತಿ ಸೇಗು